ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ನವೆಂಬರ್ 07, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 176 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999

# ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯ 7 ಗಂಟೆ ವಿದ್ಯುತ್

## ಸೌರ ವಿದ್ಯುತ್ ಮೂಲದಿಂದ ಐಪಿ ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ಕ್ರಮ: ಸಿದ್ದರಾಮಯ್ಯ

ಬೆಂಗಳೂರು, ನ. 6 - ವಿದ್ಯುತ್ ತೀವ್ರ ಅಭಾವದ ನಡುವೆಯೂ ಕೃಷಿ ಪಂಪ್ ಸೆಟ್‌ಗಳಿಗೆ ಪ್ರತಿನಿತ್ಯ 7 ಗಂಟೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.



ಗೃಹ ಕಚೇರಿ ಕೃಷ್ಣಾದಲ್ಲಿ ಇಂಧನ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಅವರು, ಪ್ರಸ್ತುತ ಐದು ಗಂಟೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು, ಇನ್ನು ಮುಂದೆ ಏಳು ಗಂಟೆ ಪೂರೈಕೆ ಮಾಡಲಾಗುವುದು ಎಂದರು. ನಿರಂತರ ಏಳು ಗಂಟೆ ವಿದ್ಯುತ್ ಒದಗಿಸಲು 600 ಮೆ.ವ್ಯಾ. ಯೂನಿಟ್‌ಗಳ ಅಗತ್ಯವಿದೆ. ರೈತರ ಬೇಡಿಕೆಯನ್ನು ಈಡೇರಿಸಲು ತೀರ್ಮಾನಿಸಿದ್ದೇವೆ.

ಮುಂದಿನ ದಿನಗಳಲ್ಲಿ ಐಪಿ ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯನ್ನು ಸೌರ ವಿದ್ಯುತ್ ಮೂಲದಿಂದ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಮುಂದಿನ ವರ್ಷದೊಳಗೆ ರೈತರಿಗೆ ಹಗಲಿನಲ್ಲೇ ಪೂರೈಸಲಾಗುವುದು ಎಂದು ಹೇಳಿದರು.

2022 ನೇ ಇಸವಿಗೆ ಹೋಲಿಸಿದರೆ 2023 ರಲ್ಲಿ ವಿದ್ಯುತ್ ಬೇಡಿಕೆ ಸರಾಸರಿ ಶೇ. 43 ರಷ್ಟು ಹೆಚ್ಚಿದೆ. ಅಕ್ಟೋಬರ್ ತಿಂಗಳಲ್ಲಿ 15,978 ಮೆಗಾ ವ್ಯಾಟ್ ಬೇಡಿಕೆ ದಾಖಲಾಗಿದೆ. ವಿದ್ಯುತ್ ಬಳಕೆಯಲ್ಲಿ ಕಳೆದ ವರ್ಷಕ್ಕಿಂತ ಶೇ. 45 ರಷ್ಟು ಹೆಚ್ಚಿದೆ.

ಕೃಷಿ ಬಳಕೆಯಲ್ಲಿ ಶೇ. 55 ರಿಂದ 119 ರಷ್ಟು ಹೆಚ್ಚಳವಾಗಿದೆ. ಇತರೆ ವಿಭಾಗಗಳಲ್ಲಿ ಶೇ. 9 ರಿಂದ 14 ರಷ್ಟು ಹೆಚ್ಚಳವಾಗಿದೆ. ಮಳೆ ಕೊರತೆ, ವಾಡಿಕೆಗಿಂತ ಮೊದಲೇ ಐಪಿ ಸೆಟ್‌ಗಳ ಬಳಕೆ ಪ್ರಾರಂಭವಾಗಿರುವುದು ಹಾಗೂ ಕೋವಿಡ್ 19ರ ನಂತರದ ಆರ್ಥಿಕ ಪುನಶ್ಚೇತನ ಇದಕ್ಕೆ ಕಾರಣವಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಕಳೆದ ಬಾರಿ ಪ್ರಗತಿ ಪರಿಶೀಲನೆಯ ನಂತರ ರಾಯಚೂರು, ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರಗಳ ಉತ್ಪಾದನೆ ಹೆಚ್ಚಾಗಿದೆ. ಉತ್ತರ ಪ್ರದೇಶ, ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಿಂದ ವಿದ್ಯುತ್ ಪಡೆಯಲಾಗುತ್ತಿದೆ.

ಸೆಕ್ಷನ್ 11 ರಡಿ ಬೇರೆ ರಾಜ್ಯಗಳಿಗೆ ವಿದ್ಯುತ್ ನೀಡದಂತೆ ಆದೇಶ ಹೊರಡಿಸಿ, ವಿದ್ಯುತ್ ಪಡೆಯಲಾಗುತ್ತಿದೆ. ಆ ಮೂಲಕ ವಿದ್ಯುತ್ ವಿತರಣೆ ಸಹಜ ಸ್ಥಿತಿಗೆ ಬಂದಿದೆ. ನೋಡಲ್ ಅಧಿಕಾರಿಗಳು ನಿರಂತರವಾಗಿ ಪರಿಸ್ಥಿತಿಯನ್ನು ಗಮನಿಸುತ್ತಿದ್ದಾರೆ.

ವಿವಿಧ ವಿದ್ಯುತ್ ಸರಬರಾಜು ಕಂಪೆನಿಗಳ ವ್ಯಾಪ್ತಿಯಲ್ಲಿ ರೈತರ ಅಗತ್ಯತೆಗನುಗುಣವಾಗಿ ಐದರಿಂದ ಏಳು ಗಂಟೆಗಳ ಅವಧಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದರು. ಸರ್ಕಾರದ ಮೇಲೆ **(4ನೇ ಪುಟಕ್ಕೆ)**

# ಕೇಂದ್ರದಿಂದ 27.50 ರೂ. ದರದಲ್ಲಿ ಗೋಧಿ ಹಿಟ್ಟು

ನವದೆಹಲಿ, ನ. 6 - 'ಭಾರತ್ ಆಟಾ' ಹೆಸರಿನಲ್ಲಿ ದೇಶಾದ್ಯಂತ ಗೋಧಿ ಹಿಟ್ಟನ್ನು ಕೆ.ಜಿ.ಗೆ 27.50 ರೂ. ದರದಲ್ಲಿ ಮಾರುವ ಯೋಜನೆಗೆ ಕೇಂದ್ರ ಸರ್ಕಾರ ಔಪಚಾರಿಕವಾಗಿ ಚಾಲನೆ ನೀಡಿದೆ.

**ದೇಶಾದ್ಯಂತ 800 ಸಂಚಾರಿ ವಾಹನ ಹಾಗೂ 2 ಸಾವಿರ ತಾಣಗಳಲ್ಲಿ ಮಾರಾಟ**

ಸಹಕಾರಿ ಸಂಸ್ಥೆಗಳಾದ ನಫೆಡ್, ಎನ್.ಸಿ.ಸಿ.ಎಫ್. ಹಾಗೂ ಕೇಂದ್ರೀಯ ಭಂಡಾರಗಳ ಮೂಲಕ 800 ಸಂಚಾರಿ ವಾಹನಗಳು ಹಾಗೂ 2 ಸಾವಿರ ಮಾರಾಟ ತಾಣಗಳ ಮೂಲಕ ಗೋಧಿ ಹಿಟ್ಟು ಮಾರಲಾಗುವುದು.

ಪ್ರಸಕ್ತ ಮಾರುಕಟ್ಟೆಯಲ್ಲಿ ಗೋಧಿ ಬಿಟ್ಟಿನ ಬೆಲೆ ಪ್ರತಿ ಕೆ.ಜಿ.ಗೆ 36 – 70 ರೂ.ಗಳಷ್ಟಿದೆ. ಗುಣಮಟ್ಟ ಹಾಗೂ ಮಾರಾಟ ಸ್ಥಳದ ಆಧಾರದ ಮೇಲೆ ಬೆಲೆಯಲ್ಲಿ ವ್ಯತ್ಯಾಸ ಇದೆ. ಫೆಬ್ರವರಿಯಲ್ಲಿ ಕೇಂದ್ರ ಸರ್ಕಾರ ಪ್ರಾಯೋಗಿಕವಾಗಿ 18 ಸಾವಿರ ಟನ್ ಗೋಧಿ ಹಿಟ್ಟನ್ನು ಕೆ.ಜಿ.ಗೆ 29.50 ರೂ.ಗಳಂತೆ ಮೂರು ಸಹಕಾರಿ ಸಂಸ್ಥೆಗಳ ಮೂಲಕ ಮಾರಾಟ ಮಾಡಿತ್ತು.

ಪ್ರಾಯೋಗಿಕ ಯೋಜನೆ ಯಶಸ್ವಿ **(3ನೇ ಪುಟಕ್ಕೆ)**

# ಸರ್ಕಾರಿ ಶಾಲೆಗಳಿಗೂ ಸ್ಮಾರ್ಟ್ ಕ್ಲಾಸ್

ದಾವಣಗೆರೆ, ನ. 6 – ಶಾಲಾ ಕೊಠಡಿಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಹಾಗೂ ಡಿಜಿಟಲ್ ಸ್ಮಾರ್ಟ್ ಕ್ಲಾಸ್‌ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ**

186 ಶಾಲೆಗಳಿಗೆ 225 ಕೊಠಡಿ ಗಳನ್ನು 31.70 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಆದಷ್ಟು ಬೇಗ ನಿರ್ಮಾಣ ಪೂರ್ಣಗೊಳಿಸಿ. ಉಳಿತಾಯವಾದ ಅನುದಾನದಲ್ಲಿ, ಹೆಚ್ಚುವರಿ ಕೊಠ ಡಿ ನಿರ್ಮಿಸಿ ಎಂದವರು ಹೇಳಿದರು.

ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಈಗಾಗಲೇ 19.46 ಕೋಟಿ ಅನುದಾನ ಬಿಡುಗಡೆಯಾಗಿದೆ. ಕಲಿಕೆ **(3ನೇ ಪುಟಕ್ಕೆ)**

# ಶಾಲೆಗಳಲ್ಲಿ ವಿದ್ಯಾರ್ಥಿನಿಯರ ಶೌಚಾಲಯಕ್ಕೆ ರಾಷ್ಟ್ರೀಯ ಮಾದರಿ

ನವದೆಹಲಿ, ನ. 6 – ಎಲ್ಲಾ ಅನುದಾನಿತ ಹಾಗೂ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಶೌಚಾಲಯಗಳನ್ನು ನಿರ್ಮಿಸುವ ಬಗ್ಗೆ ರಾಷ್ಟ್ರೀಯ ಮಾದರಿ ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಒಳಗೊಂಡ ಪೀಠ ಈ ಸೂಚನೆ ನೀಡಿದ್ದು, ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸುವ ಬಗ್ಗೆ **(4ನೇ ಪುಟಕ್ಕೆ)**

# ಪ್ರತಿಮಾ ಹತ್ಯೆ : ವಾಹನ ಚಾಲಕನ ಬಂಧನ

ಬೆಂಗಳೂರು, ನ. 6- ಗಣಿ ಇಲಾಖೆಯ ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ ಅವರನ್ನು ಕೊಂದು ಪರಾರಿಯಾಗಿದ್ದ ಆರೋ ಪದ ಮೇಲೆ ಅವರ ವಾಹನ ಚಾಲಕ ನಾಗಿದ್ದ ಕಿರಣ್ ಎಂಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಜಂಬೂ ಸವಾರಿ ದಿಣ್ಣೆಯ **(4ನೇ ಪುಟಕ್ಕೆ)**



ವಿಶೇಷ ದೀಪಾವಳಿ ಕೊಡುಗೆ!
6-15 ನವೆಂಬರ್
ಫ್ಲಾಟ್ ಕಡಿತ!
40% ಚಿನ್ನದ ತಯಾರಿಕಾ ವೆಚ್ಚದ ಮೇಲೆ
30% ಜೆಮ್ ಸ್ಟೋನ್ ಆಭರಣಗಳ ಮತ್ತು ಬೆಳ್ಳಿಯ ತಯಾರಿಕಾ ವೆಚ್ಚದ ಮೇಲೆ
8% ವಜ್ರದ ಮೌಲ್ಯದ ಮೇಲೆ
*T&C Apply
SULTHAN® DIAMONDS & GOLD BEGINNING OF CELEBRATIONS SINCE 1992
DAVANAGERE: P.B.ROAD. PH: 08192 251916
SHIVAMOGGA: GOPI CIRCLE. PH: 08182 222916
● SHIVAMOGGA ● DAVANAGERE ● BANGALORE (JAYANAGAR & ULSOOR ROAD) ● MANGALORE ● UDUPI ● KASARAGOD ● KANHANGAD ● SURATHKAL
OPENING SOON AT MYSORE & PUTTUR!

## ಪ್ರಥಮ ವರ್ಷದ ಪುಣ್ಯಸ್ಮರಣೆ



### ಶ್ರೀಮತಿ ಎಂ.ಹೆಚ್. ವಿಜಯಲಕ್ಷ್ಮೀಯವರು

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ನೆನಪು
ಸದಾ ನಮ್ಮ ಮನದಲ್ಲಿ ಶಾಶ್ವತವಾಗಿದೆ. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

ಡಾ. ವೈ.ರಾಮಪ್ಪನವರು ಮಕ್ಕಳಾದ ಕು.ಜಾಹ್ನವಿ, ವಿನಯ್ ವಿ.ಆರ್, ಶ್ರೀಮತಿ ರಾಜಲಕ್ಷ್ಮೀ ವಿನಯ್,
ಶ್ರೀ ಕುಲುಮಿ ಯಲ್ಲಪ್ಪ ಕುಟುಂಬ ವರ್ಗದವರು ನೇರ್ಲಿಗೆ, ಶ್ರೀಮತಿ ರಂಗಮ್ಮ ಹನುಮಂತಪ್ಪನವರು,
ಶ್ರೀ ಮಂಜರಿ ಹನುಮಂತಪ್ಪನವರು, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀಮತಿ ಎಂ. ಹೆಚ್. ಗಾಯತ್ರಿದೇವಿ ತಿಮ್ಮಪ್ಪನವರು, ಶ್ರೀಮತಿ ಮಂಜುಳಾದೇವಿ ವೆಂಕಟಪ್ಪನವರು,
ಶ್ರೀ ಎಂ. ಹೆಚ್. ಆಂಜನೇಯ ಗಂಗಮ್ಮನವರು, ಡಾ. ಎಂ.ಹೆಚ್. ಕೃಷ್ಣವೇಣಿ ರವಿಕುಮಾರ್‌ರವರು,
ಶ್ರೀಮತಿ ಎಂ. ಹೆಚ್. ರೇಣುಕಾದೇವಿ ಮಲ್ಲೇಶ್ ಬಾಬುರವರು, ಡಾ ಎಂ. ಹೆಚ್.ಭೂದೇವಿ ಕುಮರೇಶ್‌ರವರು,
ಶ್ರೀ ಎಂ. ಹೆಚ್. ದಿವಾಕರ್ ಮಮತರವರು, ಡಾ ಎಂ. ಹೆಚ್. ಸತ್ಯಲಕ್ಷ್ಮಿ ಗಿರೀಶ್‌ರವರು,
ಶ್ರೀಮತಿ ಲಕ್ಷ್ಮೀ. ಕೆ. ಯಲ್ಲಪ್ಪನವರು, ಶ್ರೀಮತಿ ಪಾರ್ವತಮ್ಮ ಬಸವರಾಜಪ್ಪನವರು,
ಶ್ರೀಮತಿ ಮಂಜುಳಾ ಗಂಗಾಧರರವರು, ಗದಗ,
ಶ್ರೀಮತಿ ಅನಿತಾ ಬಿ. ಶ್ರೀ ಬಸವರಾಜ್ ವೈ. ಬಂಡಿವಡ್ಡರ್‌ರವರು, ಧಾರವಾಡ.

ಈ ಪುಣ್ಯಾರಾಧನೆಯಲ್ಲಿ ಸಹೃದಯಿಗಳಾದ ತಾವುಗಳು ಪಾಲ್ಗೊಂಡು
ಇವರ ಆತ್ಮಕ್ಕೆ ಶಾಂತಿ ಕೋರಬೇಕೆಂದು ಬಯಸುತ್ತೇವೆ.

**ದಿನಾಂಕ : 07-11-2023 ಮಂಗಳವಾರ ಬೆಳಿಗ್ಗೆ 10:30ಕ್ಕೆ ದಾವಣಗೆರೆಯ ತರಳಬಾಳು ಬಡಾವಣೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ಆಯೋಜಿಸಲಾಗಿದೆ.**

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ನಗರ 4ನೇ ಕ್ರಾಸ್, ಬಸವೇಶ್ವರ ಪಾರ್ಕ್ ಎದುರು, ಆಂಜನೇಯ ಬಡಾವಣೆ ವಾಸಿ
ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು, ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ: 03.11.2023ನೇ ಶುಕ್ರವಾರ ಸಂಜೆ 07.46ಕ್ಕೆ
ನನ್ನ ಪೂಜ್ಯ ಪತಿಯವರಾದ



ಜನನ : 14.06.1945
ನಿಧನ : 03.11.2023

### ಶ್ರೀ ಯರಗುಂಟೆ ಮಂಜಣ್ಣ (ಸೊಸೈಟಿ ಮಂಜಣ್ಣ)

ಇವರು, ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆಯನ್ನು' ದಿನಾಂಕ:07.11.2023 ರ ಮಂಗಳವಾರ
ಬೆಳಿಗ್ಗೆ 11.30ಕ್ಕೆ ತರಳಬಾಳು ಸಭಾ ಭವನ (ಮಿನಿ ಚೌಲ್ಟ್ರಿ), ಅನುಭವ ಮಂಟಪ ಆವರಣ ಹದಡಿ ರಸ್ತೆ,
ದಾವಣಗೆರೆಯಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

: ದುಃಖತಪ್ತ ಕುಟುಂಬವರ್ಗ :
ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು,
ಬೂದಿಹಾಳ್ ವಂಶಸ್ಥರು ಹಾಗು ಬಂಧು-ಮಿತ್ರರು.
ಮೊ : 94482 74343, 98440 54343
4ನೇ ಕ್ರಾಸ್, ಬಸವೇಶ್ವರ ಪಾರ್ಕ್ ಎದುರು, ಆಂಜನೇಯ ಬಡಾವಣೆ, ದಾವಣಗೆರೆ.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿಸುತ್ತೇವೆ.

# ಅಭಿವೃದ್ಧಿ ಕೆಲಸಗಳು ಕುಂಠಿತವಾಗಬಾರದು: ಶಾಸಕ ಬಿ. ದೇವೇಂದ್ರಪ್ಪ ಖಡಕ್ ಸೂಚನೆ

ಬಿ.ಪಿ.ಸುಭಾನ್



ಜಗಳೂರು, ನ.6- ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳು ತಲುಪಬೇಕು. ಅಭಿವೃದ್ಧಿ ಕೆಲಸಗಳು ಕುಂಠಿತವಾಗಬಾರದು, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಒಂದು ತಂಡವಾಗಿ ಕೆಲಸ ಮಾಡುವ ಮೂಲಕ ಬರಗಾಲ ಎದುರಿಸೋಣ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಇಂದು ನಡೆದ 'ತ್ರೈಮಾಸಿಕ ಕೆಡಿಪಿ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆ ಇಲ್ಲದೆ ಜನರು ಸಂಕಷ್ಟದಲ್ಲಿದ್ದಾರೆ, ಅವರಿಗೆ ಸ್ಪಂದಿಸಿ ಅಧಿಕಾರಿಗಳು ಕೆಲಸ ಮಾಡಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ನನ್ನ ಪ್ರೋತ್ಸಾಹ ಇದೆ. ಆದರೆ ಸೋಮಾರಿಗಳಿಗೆ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳಿಗೆ ತಕ್ಕ ದಂಡನೆ ವಿಧಿಸಲು ನಾನು ಹಿಂದೆ-ಮುಂದೆ ನೋಡುವುದಿಲ್ಲ ಎಂದು ಶಾಸಕರು ಖಡಕ್ ಸೂಚನೆ ನೀಡಿದರು.

ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಕುಡಿಯುವ ನೀರು, ಶಿಥಿಲಗೊಂಡ ಶಾಲಾ ಕಟ್ಟಡಗಳ ದುರಸ್ತಿ ಮತ್ತು ರಸ್ತೆಗಳ ಗುಂಡಿ ಮುಚ್ಚುವುದು ಹಾಗೂ ಉದ್ಯೋಗ ಖಾತ್ರಿ ಕೆಲಸಕ್ಕೆ ಆದ್ಯತೆ ನೀಡಬೇಕು. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ಮುಂಜಾಗ್ರತಾ ಕ್ರಮವಾಗಿ ಖಾಸಗಿ ಬೋರ್‌ವೆಲ್ ಮಾಲೀಕರೊಂದಿಗೆ ಚರ್ಚಿಸಿ ಬಾಡಿಗೆ ಆಧಾರದ ಮೇಲೆ ನೀರು ಪೂರೈಕೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಆದೇಶ ನೀಡಿದರು.

ಗ್ರಾಪಂ ವ್ಯಾಪ್ತಿಯಲ್ಲಿ ಬೋರ್‌ಗಳ ದುರಸ್ತಿ ಹಾಗೂ ಖಾಸಗಿ ಬೋರ್‌ವೆಲ್ ಮಾಲೀಕರೊಂದಿಗೆ ಬಾಡಿಗೆ ರೂಪದಲ್ಲಿ ನೀರು ಪಡೆಯಲು ಈಗಾಗಲೇ ಕ್ರಮ ವಹಿಸಲಾಗಿದೆ. ಇದಕ್ಕಾಗಿ ನಮ್ಮ ಪಿಡಿ ಖಾತೆಯಲ್ಲಿ ರೂ. 86.67 ಲಕ್ಷ ರೂ. ಅನುದಾನ ಲಭ್ಯವಿದೆ ಎಂದು ತಹಶೀಲ್ದಾರ್ ಸೈಯದ್ ಸಾಧಿಕ್ ಉಲ್ಲಾ ಮಾಹಿತಿ ನೀಡಿದರು.

ಮುಂದಿನ ದಿನಗಳಲ್ಲಿ ಅಗತ್ಯವಿದ್ದರೆ ಗೋಶಾಲೆಗಳನ್ನು ತೆರೆಯಲು ಮತ್ತು ಮೇವಿನ ಕೊರತೆಯನ್ನು ನೀಗಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಪಶುವೈದ್ಯಕೀಯ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಲಿಂಗರಾಜು ಅವರಿಗೆ ಶಾಸಕರು ಸೂಚನೆ ನೀಡಿದರು. ಇನ್ನು 16 ವಾರಗಳಿಗೆ ಆಗುವಷ್ಟು ಮೇವಿನ ಲಭ್ಯತೆ ಇದ್ದು, ರೈತರಿಗೆ ಮೇವಿನ ಬೀಜದ ಕಿಟ್ ವಿತರಿಸಲು ಇಲಾಖೆಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಲಿಂಗರಾಜ್ ಮಾಹಿತಿ ನೀಡಿದರು.

**ಜಗಳೂರು ತಾಲ್ಲೂಕು ಪಂಚಾಯತಿ ತ್ರೈಮಾಸಿಕ ಕೆ ಡಿ ಪಿ ಸಭೆ**

ಗೃಹಲಕ್ಷ್ಮಿ ಯೋಜನೆಯಲ್ಲಿ ಕೆಲವು ಫಲಾನುಭವಿಗಳಿಗೆ ಹಣ ಪಾವತಿಯಾಗದ ಕಾರಣ ಗೊಂದಲ ಸೃಷ್ಟಿಸುತ್ತಿರುವ ಬಗ್ಗೆ ಜನರಿಗೆ ಸ್ಪಷ್ಟ ಹಾಗೂ ನಿಖರ ಮಾಹಿತಿ ನೀಡಿ ಸರಿಪಡಿಸಬೇಕೆಂದು ಶಾಸಕರು ಸೂಚನೆ ನೀಡಿದರು.

39 ಸಾವಿರ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದು 37,247 ಜನ ಫಲಾನುಭವಿಗಳಿಗೆ ಈಗಾಗಲೇ ಹಣ ಪಾವತಿಯಾಗಿದೆ. ಆಧಾರ್ ಲಿಂಕ್ ಆಗದೇ ಇರುವ ಮತ್ತು ಇಕೆವೈಸಿ ಮತ್ತು ಹೆಸರು ಕೆಲ ತಾಂತ್ರಿಕ ತೊಂದರೆಗಳಿರುವ ಫಲಾನುಭವಿಗಳಿಗೆ ಹಣ ಪಾವತಿ ಆಗಿಲ್ಲ. ಅವರಿಗೆ ಸೂಕ್ತ ಮಾಹಿತಿಯನ್ನು ನೀಡಲಾಗುವುದು ಎಂದು ಸಿಡಿಪಿಓ ಬೀರೇಂದ್ರ ಕುಮಾರ್ ಸಭೆಗೆ ತಿಳಿಸಿದರು.

ಬ್ಯಾಂಕಿನವರು ಖಾತೆಯಲ್ಲಿ ಇರುವ ಸಣ್ಣ ಪುಟ್ಟ ಲೋಪದೋಷಗಳನ್ನು ಸರಿಪಡಿಸಲು ಹಾಗೂ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಲು ಬ್ಯಾಂಕ್ ಅಧಿಕಾರಿಗಳ ಸಭೆ ಕರೆದು ಚರ್ಚಿಸಿ, ಕ್ರಮ ಕೈಗೊಳ್ಳಲು ತಹಶೀಲ್ದಾರ್ ಅವರಿಗೆ ಶಾಸಕರು ಸೂಚನೆ ನೀಡಿದರು.

ಬರದ ಹಿನ್ನೆಲೆಯಲ್ಲಿ ಬೆಳೆ ಹಾನಿ ಆದವರಿಗೆ ಪರಿಹಾರ ನೀಡುವ ಬಗ್ಗೆ ಇಲಾಖೆಯು ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡಿದ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಿಥುನ್ ಕಿಮಾವತ್, ತಾಲ್ಲೂಕಿನಲ್ಲಿ ಶೇ. 100ರಷ್ಟು ಬೆಳೆ ಹಾನಿಯಾಗಿದ್ದು ಎನ್‌ಡಿಆರ್‌ಎಫ್ ಕೇಂದ್ರದಿಂದ ರೂ. 8500 ಮತ್ತು ಎಸ್‌ಡಿಆರ್‌ಎಫ್ ರಾಜ್ಯದಿಂದ ರೂ. 5100 ಒಂದು ಹೆಕ್ಟೇರಿಗೆ 13600 ರೂ ಪರಿಹಾರ ಸಿಗುವ ಸಂಭವವಿದ್ದು, ರೈತರಿಗೆ ಎಷ್ಟೇ ಜಮೀನಿದ್ದರೂ ಎರಡು ಹೆಕ್ಟೇರಿಗೆ ಮಾತ್ರ ಪರಿಹಾರ ಸಿಗಲಿದೆ. ಈ ಪರಿಹಾರ ಪಡೆಯಲು ಫಿಡ್ ಮಾಡಿಸುವುದು ಕಡ್ಡಾಯವಾಗಿರುತ್ತದೆ ಎಂದು ಮಾಹಿತಿ ನೀಡಿದರು.

**ಅಕ್ರಮ ಮದ್ಯ ಮಾರಾಟ, ಶಾಸಕರ ಅಸಮಾಧಾನ:** ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು, ಜೂಜಾಟ, ಮಟ್ಕಾ ದಂಧೆಗಳು ನಡೆಯುತ್ತಿರುವ ಬಗ್ಗೆ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ನನ್ನ ಸ್ವಗ್ರಾಮ ಚಿಕ್ಕಮ್ಮನಹಟ್ಟಿಯಲ್ಲಿ ನಾಲ್ಕಾರು ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿದೆ. ಅಬಕಾರಿ ಇಲಾಖೆಯವರಿಗೆ ತಿಳಿಸಿದರೂ ಪ್ರಯೋಜನವಾಗಿಲ್ಲ. ಬರ ಪರಿಸ್ಥಿತಿಯಲ್ಲಿ ಜನ ಸಂಕಷ್ಟದಲ್ಲಿದ್ದಾರೆ. ಜೂಜು, ಮಟ್ಕಾದಂತಹ ಚಟಗಳಿಗೆ ಬಲಿಯಾಗಿ ಗ್ರಾಮೀಣ ಪ್ರದೇಶದಲ್ಲಿ ಕೆಟ್ಟ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಪೊಲೀಸರು ತಕ್ಷಣ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಕ್ರಮ ಕೈಗೊಳ್ಳಬೇಕೆಂದು ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀನಿವಾಸ್ ರಾವ್ ಅವರಿಗೆ ಶಾಸಕರು ಸೂಚನೆ ನೀಡಿದರು.


**ಬಾಡಿಗೆ ಕಟ್ಟದ ಕಟ್ಟಡದಲ್ಲಿರುವ ಸರ್ಕಾರಿ ಕಚೇರಿಗಳು:** ಬಾಡಿಗೆ ಕಟ್ಟಡದಲ್ಲಿರುವ ಸರ್ಕಾರಿ ಕಚೇರಿಗಳು ತಕ್ಷಣವೇ ಸರ್ಕಾರಿ ಕಟ್ಟಡಕ್ಕೆ ಸ್ಥಳಾಂತರಗೊಳ್ಳಬೇಕೆಂದು ಶಾಸಕರು ಖಡಕ್ ಸೂಚನೆ ನೀಡಿದರು. ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಸೇರಿದಂತೆ ಖಾಸಗಿ ಕಟ್ಟಡದಲ್ಲಿರುವ ಕಚೇರಿಗಳು ತಕ್ಷಣವೇ ಪಟ್ಟಣ ಪಂಚಾಯಿತಿ ಕಟ್ಟಡಕ್ಕೆ, ಸರ್ಕಾರಿ ಕಟ್ಟಡಕ್ಕೆ ಸ್ಥಳಾಂತರಗೊಳ್ಳಬೇಕು ಎಂದರು.

ಇದರಿಂದಾಗಿ ಸರ್ಕಾರಕ್ಕೆ ಉಳಿತಾಯವಾಗಲಿದೆ ಮತ್ತು ಪಟ್ಟಣ ಪಂಚಾಯಿತಿ ಆದಾಯವು ಬರಲಿದೆ. ಅಧಿಕಾರಿಗಳು ಯಾವುದೇ ನಿರ್ಲಕ್ಷ್ಯ ಮಾಡದೆ ತಕ್ಷಣವೇ ಕಚೇರಿ ಸ್ಥಳಾಂತರಿಸಬೇಕೆಂದು ಶಾಸಕರು ಸೂಚನೆ ನೀಡಿದರು.

ಸಭೆಯಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಕರಿಬಸಪ್ಪ, ತಹಶೀಲ್ದಾರ್ ಸೈಯದ್ ಸಾಧಿಕ್ ಉಲ್ಲಾ, ಸಿಪಿಐ ಶ್ರೀನಿವಾಸರಾವ್, ಮುಖ್ಯಾಧಿಕಾರಿ ಲೋಕನಾಯಕ್, ಗ್ರೇಡ್ 2 ತಹಶೀಲ್ದಾರ್ ಮಂಜಾನಂದ, ಗ್ರಾಮೀಣ ನೀರು, ನೈರ್ಮಲ್ಯ ಇಲಾಖೆ ಎಇಇ ಸಾದಿಕ್‌ಉಲ್ಲಾ, ಬಿಇಓ ಹಾಲಮೂರ್ತಿ, ಬೆಸ್ಕಾಂ ಎಇಇ ಸುಧಾಮಣಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಲೋಹಿತ್, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ತೋಟಪ್ಪ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಎಇ ಇ ಶಿವಮೂರ್ತಿ, ವಿವಿಧ ಇಲಾಖೆಯ ಅನುಷ್ಠಾನಾಧಿಕಾರಿಗಳು ಮತ್ತು ಗ್ರಾಮ ಪಂಚಾಯತ್ ಪಿಡಿಓಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಜೇಮಿ ಬೆರಳ ತುದಿಯಲ್ಲಿ ಬುಗುರಿಯಾದ ಫುಟ್‌ಬಾಲ್!





ದಾವಣಗೆರೆ, ನ. 6 – ಅಂತರರಾಷ್ಟ್ರೀಯ ಕ್ರೀಡಾಪಟು ಜೇಮಿ ನೈಟ್ ಅವರು ಸೋಮವಾರ ನಗರದ ಪೋದಾರ್ ಅಂತರರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳಿಗೆ ಫ್ರೀಸ್ಟೈಲ್ ಫುಟ್‌ಬಾಲ್ ತರಬೇತಿ ನೀಡಿದರು.

ಏಳು ತಂಡಗಳಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಜೇಮಿ ಅವರು ಫ್ರೀಸ್ಟೈಲ್ ಫುಟ್‌ಬಾಲ್ ಕೌಶಲ್ಯ ಪ್ರದರ್ಶಿಸಿದರಲ್ಲದೇ, ಈ ಕ್ರೀಡೆ ಕಲಿಯಲು ಮಾರ್ಗದರ್ಶನ ಮಾಡಿದರು.

ತೋರು ಬೆರಳಿನ ಮೇಲೆ ಫುಟ್‌ಬಾಲ್ ಅನ್ನು ಗಿರಗಿಟ್ಟಲೆಯಂತೆ ತಿರುಗಿಸುವ, ಕಾಲ್ಚೆಂಡನ್ನು ತಲೆಯ ಮೇಲೆ ಬ್ಯಾಲೆನ್ಸ್ ಮಾಡುವುದು, ಕಾಲಿನಿಂದ ಫುಟ್‌ಬಾಲ್ ಮೇಲೆ ತೂರಿ ಹೆಗಲ ಮೇಲೆ ಕೂರಿಸಿಕೊಳ್ಳುವುದೂ ಸೇರಿದಂತೆ ಸುಮಾರು ಹತ್ತು ಫ್ರೀಸ್ಟೈಲ್ ಶೈಲಿಗಳನ್ನು ಜೇಮಿ ಪ್ರದರ್ಶಿಸಿ ವಿದ್ಯಾರ್ಥಿಗಳನ್ನು ಮಂತ್ರಮುಗ್ಧಗೊಳಿಸಿದರು.

ಪುಟ್ಟ ಬಾಲಕಿಯ ಬೆರಳಿನ ಮೇಲೂ ಫುಟ್‌ಬಾಲ್ ಅನ್ನು ಬುಗುರಿಯಂತೆ ತಿರುಗಿಸುವಂತೆ ಮಾಡಿದ ಜೇಮಿ, ಈ ಕಲೆ ಎಲ್ಲರೂ ಕರಗತಗೊಳಿಸಿಕೊಳ್ಳಬಹುದು. ಫ್ರೀಸ್ಟೈಲ್ ಫುಟ್‌ಬಾಲ್ ಮೂಲಕ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸಿಕೊಳ್ಳಬಹುದು ಎಂದು ತಿಳಿಸಿದರು.

**ಪೋದಾರ್ ಶಾಲೆಯಲ್ಲಿ ಫ್ರೀಸ್ಟೈಲ್ ಫುಟ್‌ಬಾಲ್ ಪ್ರದರ್ಶಿಸಿದ ಅಂತರರಾಷ್ಟ್ರೀಯ ಕ್ರೀಡಾಪಟು ಜೇಮಿ ನೈಟ್**

ಈಗಿನ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ದೊರೆತಲ್ಲಿ ಅತ್ಯಲ್ಪ ಅವಧಿಯಲ್ಲಿ ಫ್ರೀಸ್ಟೈಲ್‌ನಲ್ಲಿ ಪರಿಣಿತರಾಗಬಹುದು ಎಂದ ಅವರು, ಫುಟ್ಬಾಲ್‌ನಲ್ಲಿ ಭಾರತ ಜಾಗತಿಕ ಶಕ್ತಿಯಾಗಲು ಎಲ್ಲ ಅವಕಾಶಗಳಿವೆ. ಶೀಘ್ರದಲ್ಲಿಯೇ ಭಾರತವು ಫುಟ್ಬಾಲ್ ವಿಶ್ವಕಪ್‌ನಲ್ಲಿ ಸ್ಪರ್ಧಿಸುವ ದಿನಗಳು ಬರಲಿವೆ ಎಂದೂ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಪ್ರಾಂಶುಪಾಲೆ ಪಲಕುರಿ ರೇವತಿ, ಪೋದಾರ್ ಇಂಟರ್‌ನ್ಯಾಷನಲ್ ಸಮೂಹದ ಮಹಾರಾಷ್ಟ್ರ ಹಾಗೂ ಕರ್ನಾಟಕದ ಶಾಲೆಗಳಲ್ಲಿ ಜೇಮಿ ನೈಟ್ ಅವರು ಈ ಕೌಶಲ್ಯವನ್ನು ಕಲಿಸುತ್ತಿದ್ದಾರೆ. ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಾಕಷ್ಟು ಉತ್ಸಾಹ ತೋರಿದ್ದಾರೆ ಎಂದು ಹೇಳಿದರು.

ಪೋದಾರ್ ಶಾಲೆಯ ಅಧಿಕಾರಿ ಸ್ಯಾಮ್ಸನ್ ರಾಯ್ ಮಾತನಾಡಿ, ಮುಂದಿನ ದಿನಗಳಲ್ಲಿ ಶಿಬಿರಗಳನ್ನು ಆಯೋಜಿಸುವ ಮೂಲಕ ಫ್ರೀಸ್ಟೈಲ್ ಕಲಿಸಲಾಗುವುದು ಎಂದು ಹೇಳಿದರು.ವ ಈ ಸಂದರ್ಭದಲ್ಲಿ ಶಾಲಾ ಸಮೂಹದ ಕೌಶಲ್ಯ ಅಭಿವೃದ್ಧಿ ತಂಡದ ಜ್ಯೋತಿ ಗಾಲಾ ಉಪಸ್ಥಿತರಿದ್ದರು.

## ಎರಡು ಗಿನ್ನಿಸ್ ದಾಖಲೆಗಳ ಸಾಧನೆ

ಜೇಮಿ ವಿಶ್ವದ ಅತ್ಯಂತ ಅನುಭವಿ ಮತ್ತು ಫ್ರೀಸ್ಟೈಲರ್‌ಗಳಲ್ಲಿ ಅತ್ಯಂತ ಬೇಡಿಕೆ ಇರುವ ಬ್ರಿಟಿಷ್ ಆಟಗಾರ. 2020ರಲ್ಲಿ ಒಂದೇ ನಿಮಿಷದಲ್ಲಿ 26 ಬಾರಿ 'ಬ್ಲೈಂಡ್ ಹೀಲ್' ಚಾಕಚಕ್ಯತೆ ಮೂಲಕ ಅವರು ಗಿನ್ನಿಸ್ ವಿಶ್ವದಾಖಲೆ ಮಾಡಿದ್ದಾರೆ. ಅಲ್ಲದೇ, 30 ಸೆಕೆಂಡುಗಳಲ್ಲಿ 15 ಬಾರಿ ಫುಟ್‌ಬಾಲ್ ನೆಕ್ ಫ್ಲಿಕ್ ಮಾಡುವ ಮೂಲಕ ಇನ್ನೊಂದು ಗಿನ್ನಿಸ್ ದಾಖಲೆ ಬರೆದಿದ್ದಾರೆ.

ಕ್ರೀಡೆಗಳ ಕುರಿತು ಹೆಚ್ಚಿನ ಗಮನಹರಿಸುವ ಮತ್ತು ಅಂತರರಾಷ್ಟ್ರೀಯ ಆಟಗಾರರು, ತರಬೇತುದಾರರಿಂದ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವ ಪೋದಾರ್ ಎಜುಕೇಷನ್ ನೆಟ್‌ವರ್ಕ್‌ನ ಉಪಕ್ರಮದ ಭಾಗವಾಗಿ ಜೇಮಿ ಭಾರತಕ್ಕೆ ಎರಡನೇ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಾನು 15ನೇ ವರ್ಷದಲ್ಲಿ ಫ್ರೀಸ್ಟೈಲ್ ಕಲಿಕೆ ಆರಂಭಿಸಿದೆ. ನಂತರದ ಹದಿನೈದು ವರ್ಷಗಳಲ್ಲಿ ಈ ಕೌಶಲ್ಯ ಪ್ರದರ್ಶಿಸುತ್ತಾ ಬಂದಿದ್ದೇನೆ ಎಂದರು.

ಆರಂಭದ ದಿನಗಳಲ್ಲಿ ನನಗೆ ಮಾರ್ಗದರ್ಶಕರು ಇರಲಿಲ್ಲ. ಬೆರಳ ಮೇಲೆ ಫುಟ್‌ಬಾಲ್ ಅನ್ನು ಬುಗುರಿಯಂತೆ ತಿರುಗಿಸುವ ಒಂದೇ ಕೌಶಲ್ಯ ಕಲಿಯಲು ಒಂದು ವರ್ಷ ಬೇಕಾಯಿತು. ಈಗ ಸೂಕ್ತ ಮಾರ್ಗದರ್ಶನದಲ್ಲಿ ಎರಡೇ ತಿಂಗಳಲ್ಲಿ ಈ ಕಲೆ ಕರಗತ ಮಾಡಿಕೊಳ್ಳಬಹುದು. ಕೆಲ ವಿದ್ಯಾರ್ಥಿಗಳಂತೂ ನಿಮಿಷಗಳಲ್ಲೇ ಚೆಂಡು ತಿರುಗಿಸುವುದನ್ನು ಕಲಿಯುತ್ತಿದ್ದಾರೆ ಎಂದು ತಿಳಿಸಿದರು.

ಮಕ್ಕಳಲ್ಲಿ ಫ್ರೀಸ್ಟೈಲ್ ಬಗ್ಗೆ ಸಾಕಷ್ಟು ಕೌತುಕ ಇದೆ. ಮೊದಲ ಬಾರಿಗೆ ಈ ಕೌಶಲ್ಯ ನೋಡಿದವರಂತೂ ನಿಬ್ಬೆರಗಾಗಿದ್ದಾರೆ. ಇವರಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಫ್ರೀಸ್ಟೈಲ್ ಕಲಿಕೆಯ ಬಗ್ಗೆ ಆಸಕ್ತಿ ತೋರಿದ್ದಾರೆ. ಸಾವಿರಾರು ಜನರಿಗೆ ಕೌಶಲ್ಯ ಪ್ರದರ್ಶಿಸಿದ್ದೇನೆ. ಇವರಲ್ಲಿ ಒಬ್ಬರು ಪರಿಣಿತರಾದರೂ ನನ್ನ ಪ್ರಯತ್ನ ಸಾರ್ಥಕವಾದಂತೆ ಎಂದು ಹೇಳಿದರು.

# ಯೋಗಪಟುಗಳು ಪದವಿ ಪಡೆದ ವೈದ್ಯರಿದ್ದಂತೆ



**ಹರಿಹರದಲ್ಲಿನ ಯೋಗ ಸ್ಪರ್ಧೆಗಳ ತರಬೇತಿ ಶಿಬಿರದಲ್ಲಿ ಶಾಸಕ ಬಿ.ಪಿ. ಹರೀಶ್ ಬಣ್ಣನೆ**

ಹರಿಹರ, ನ. 6 - ಯೋಗ ಎನ್ನುವುದು ಕೇವಲ ಒಂದು ಕ್ರೀಡೆಯಾಗಲೀ ಅಥವಾ ಪ್ರದರ್ಶನ ಮಾಡುವಂತಹ ಕ್ರೀಡೆಯಲ್ಲ, ದೇಹವನ್ನು ಸದೃಢ ಆರೋಗ್ಯದ ಕಡೆಗೆ ತೆಗೆದುಕೊಂಡು ಹೋಗವಂತಹ ವಿದ್ಯೆಯಾಗಿದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.


ನಗರದ ವಾಸವಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ, ಕರ್ನಾಟಕ ರಾಜ್ಯ ಅಮೆಚೂರ್ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್, ದಾವಣಗೆರೆಯ ಸಪ್ತರ್ಷಿ ಯೋಗಧಾರ ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಜಿಲ್ಲಾ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ನಿಂದ ಏರ್ಪಾಡಾಗಿದ್ದ ರಾಜ್ಯ ಯೋಗ ಸ್ಪರ್ಧೆಗಳ ತರ ಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯೋಗ ಕಲಿತ ಯೋಗಪಟುಗಳು ಒಬ್ಬ ಪದವಿ ಪಡೆದ ವೈದ್ಯರಿದ್ದಂತೆ ಅವರಲ್ಲಿ ಕಾಣುವ ಎಲ್ಲಾ ಬಗೆಯ ಅಂಶಗಳನ್ನು ಒಬ್ಬ ಯೋಗಪಟುವಿನಲ್ಲಿ ಕಾಣಬಹುದಾಗಿದೆ ಎಂದು ಹೇಳಿದರು.

ಜಿಲ್ಲಾ ಯೋಗ ಒಕ್ಕೂಟದ ವಾಸುದೇವ ರಾಯ್ಕರ್ ಮಾತನಾಡಿ, ಜಗತ್ತಿನಲ್ಲಿ ಇತ್ತೀಚೆಗೆ ಅತ್ಯಂತ ವೇಗವಾಗಿ ಪ್ರವರ್ತಮಾನಕ್ಕೆ ಬರುತ್ತಿರುವ ಕ್ರೀಡೆಗಳಲ್ಲಿ ಯೋಗಾಸನವು ಮೊದಲನೇ ಸ್ಥಾನದಲ್ಲಿದೆ. ದೇಶದಲ್ಲಿ ಮತ್ತು ವಿಶ್ವದಲ್ಲಿ ಯೋಗಕ್ಕೆ ವಿಶೇಷವಾದ ಸ್ಥಾನಮಾನ ದೊರೆಯುತ್ತಿರುವುದಕ್ಕೆ ಕೇಂದ್ರ ಸರ್ಕಾರದ ಸಂಪೂರ್ಣ ಸಹಕಾರ ದೊರೆಯುತ್ತಿದ್ದು, ಹಾಗಾಗಿ ವೇಗವಾಗಿ ವಿಶ್ವದಾದ್ಯಂತ ಬೆಳೆಯುತ್ತಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ಜಿ.ಎನ್. ಕೃಷ್ಣಮೂರ್ತಿ, ಕಾರ್ಯದರ್ಶಿ ಕೆ.ಪ್ರಭು, ಖಜಾಂಚಿ ಪಿ.ಆರ್. ಕೃಷ್ಣಮೂರ್ತಿ, ಉಪಾಧ್ಯಕ್ಷ ಬಿ.ಎಂ. ಗಿರೀಶ್, ಜಂಟಿ ಕಾರ್ಯದರ್ಶಿ ಎ.ನಟರಾಜ್, ಎಚ್. ಎಸ್.ಶ್ರೀಧರ ಮೂರ್ತಿ, ಎಸ್.ವೈ.ಎಸ್.ಎ. ಅಧ್ಯಕ್ಷ ಕೆ. ಜೈಮುನಿ, ನಿರ್ದೇಶಕರಾದ ಶೈಲಜಾ ಸೇರಿ ದಂತೆ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕೊಟ್ಟೂರಿಗೆ ತಹಶೀಲ್ದಾರರಾಗಿ ಮತ್ತೆ ಜಿ.ಕೆ. ಅಮರೇಶ್



ಕೊಟ್ಟೂರು, ನ.6 - ಕೊಟ್ಟೂರು ತಹಶೀಲ್ದಾರರಾಗಿ ಕುಮಾರಸ್ವಾಮಿಯವರು ವರ್ಗಾವಣೆಯಾದ ನಂತರ ಖಾಯಂ ತಹಶೀಲ್ದಾರ್ ಇಲ್ಲದೇ ಕೊಟ್ಟೂರಿನ ಆಡಳಿತದಲ್ಲಿ ವ್ಯತ್ಯಯವುಂಟಾಗಿತ್ತು.

ನಂತರ ಪ್ರಭಾರಿಯಾಗಿ ಅಮರೇಶ್.ಜಿ.ಕೆ.ರವರು ಪರೀಕ್ಷಾರ್ಥ, ತದನಂತರ ಕಾರ್ತಿಕ್‌ರವರು ತಹಶೀಲ್ದಾರರಾಗಿ ಅಧಿಕಾರ ಸ್ವೀಕರಿಸಿದ್ದರು. ಸೋಮವಾರ ಕೊಟ್ಟೂರಿಗೆ ಮುಂದಿನ ಆದೇಶದವರೆಗೆ ತಹಶೀಲ್ದಾರರನ್ನಾಗಿ ಅಮರೇಶ್.ಜಿ.ಕೆ. ಅವರನ್ನೇ ನೇಮಿಸಿ ಸರ್ಕಾರದ ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಪ್ರಭಾರಿ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿ ಅನುಭವವಿರುವ ಅಮರೇಶ್ ಅವರಿಗೆ ಕೊಟ್ಟೂರಿನ ಸಮಗ್ರ ಮಾಹಿತಿ ಇರುವುದರಿಂದ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿ ಜನರ ಭರವಸೆಗಳನ್ನು ಈಡೇರಿಸುವ ಹೊಸ ಮಂದಹಾಸ ಸಾರ್ವಜನಿಕರಲ್ಲಿ ಮೂಡಿದೆ.

## ವಿನೋಬನಗರದಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ

ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ 'ನಮ್ಮ ನಡೆ ಆರೋಗ್ಯದೆಡೆ' ಕಾರ್ಯಕ್ರಮದ ಅಂಗವಾಗಿ ಉಚಿತ ಸಮಾಲೋಚನೆ ಮತ್ತು ಆರೋಗ್ಯ ತಪಾಸಣಾ ಶಿಬಿರ ಹಾಗೂ ಶ್ರೀ ಶುಭಲಕ್ಷ್ಮಿ ಮಹಿಳಾ ಮಂಡಳಿ ಇವರ ಆಶ್ರಯದಲ್ಲಿ ಪರಿಣಿತ ವೈದ್ಯರಿಂದ ಉಚಿತ ಸಮಾಲೋಚನೆಯನ್ನು ಉಚಿತ ಆರೋಗ್ಯ ತಪಾಸಣೆ, ಸೂಕ್ತ ಸಲಹೆ ಹಾಗೂ ಚಿಕಿತ್ಸೆ ನೀಡಲಾಗುವುದು. ಚಿಕಿತ್ಸೆ ಮಹಿಳೆಯರಿಗೆ ಮಾತ್ರ ನೀಡಲಾಗುವುದು.

ಚಿಕಿತ್ಸೆಯು ಜಜಮು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದೊಂದಿಗೆ ನಡೆಯುವುದು. ಈ ಶಿಬಿರವು ವಿನೋಬನಗರದ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ ಬಳಿಯ ಶ್ರೀಮತಿ ಪಾರ್ವತಮ್ಮ ಡಾ. ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಡೆಯುವುದು. ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, 17ನೇ ವಾರ್ಡ್ ಕಾಂಗ್ರೆಸ್ ಮಧು ಪವಾರ್ ಕೋರಿದ್ದಾರೆ.

## ರಾಣೇಬೆನ್ನೂರು ಗಾಯತ್ರಿ ಕ್ಯಾಂಪಸ್‌ನಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ



ರಾಣೇಬೆನ್ನೂರು, ನ.6- ನಗರದ ಬಿಎಜೆಎಸ್‌ಎಸ್ ಸಂಸ್ಥೆಯ ಗಾಯತ್ರಿ ಕ್ಯಾಂಪಸ್‌ನಲ್ಲಿ ಸಂಚಾರಿ ಶ್ರೀ ರಾಮಾಂಜನೇಯ ಸ್ವಾಮಿ ಪೀಠಾಧಿಪತಿ ಶ್ರೀ ದತ್ತಾತ್ರೇಯ ವಾಸುದೇವ ಜಿಯರ್ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶ್ರೀಗಳು, ನವೆಂಬರ್ 4 ರಿಂದ 20 ರವರೆಗೆ ಕ್ಯಾಂಪಸ್‌ನಲ್ಲಿದ್ದು, ಗಾಯತ್ರಿ ದೇವಿಯ ಪಂಚಲೋಹದ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಸೇರಿದಂತೆ, 15 ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮ ನೆರವೇರಿಸುವರು ಎಂದು ಸಂಸ್ಥೆಯ ಕಾರ್ಯದರ್ಶಿ ಡಾ. ಆರ್. ಎಂ. ಕುಬೇರಪ್ಪ ಹಾಗೂ ಛೇರ್ಮನ್ ರುದ್ರಪ್ಪ ಲಮಾಣಿ ತಿಳಿಸಿದರು.

## ಕಾಡಜ್ಜಿಯಲ್ಲಿ ಇಂದು ರೈತರಿಗೆ ಅರಿವು ಕಾರ್ಯಕ್ರಮ

ಪಂಪ್‌ಸೆಟ್ ಇಂಧನ ಉಳಿತಾಯ ಮತ್ತು ನೀರಿನ ಸಂರಕ್ಷಣೆ ಕುರಿತಂತೆ ರೈತರಿಗೆ ಇಂದು ಬೆಳಿಗ್ಗೆ 10-30ಕ್ಕೆ ಕಾಡಜ್ಜಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9844295795.

## ದೋಷ ಮುಕ್ತರ ಬಿಡುಗಡೆಗೂ ಜಾಮೀನು ಬಾಂಡ್
## ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ, ನ. 6 – ಪ್ರಕರಣದಿಂದ ದೋಷ ಮುಕ್ತವಾದವರೂ ಸಹ ಜೈಲಿನಿಂದ ಬಿಡುಗಡೆಯಾಗಲು ಜಾಮೀನಿನ ಬಾಂಡ್ ಹಾಗೂ ಶ್ಯೂರಿಟಿ ನೀಡಬೇಕು ಎಂಬ ಕ್ರಿಮಿನಲ್ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಪ್ರತಿಕ್ರಿಯೆ ನೀಡುವಂತೆ ತಿಳಿಸಲಾಗಿದೆ.

ಸಿ.ಆರ್.ಪಿ.ಸಿ.ಯ ಸೆಕ್ಷನ್ 437ಎ ಅನ್ವಯ, ದೋಷ ಮುಕ್ತವಾದ ವ್ಯಕ್ತಿ ಆರು ತಿಂಗಳ ಅವಧಿಗೆ ಜಾಮೀನು ಬಾಂಡ್ ಹಾಗೂ ಶ್ಯೂರಿಟಿ ಸಲ್ಲಿಸಬೇಕಿದೆ. ನಂತರವೇ ಅವರನ್ನು ಕಸ್ಟಡಿಯಿಂದ ಬಿಡುಗಡೆ ಮಾಡಲಾಗುತ್ತದೆ. ದೋಷ ಮುಕ್ತವಾದ ಬಗ್ಗೆ ಸರ್ಕಾರ ಮೇಲ್ಮನವಿ ಸಲ್ಲಿಸಲು ಬಯಸಿದರೆ ವ್ಯಕ್ತಿ ಲಭ್ಯವಿರುವಂತೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗುತ್ತದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ಅರ್ಜಿಯ ವಿಚಾರಣೆ ನಡೆಸುತ್ತಿದೆ. ಈ ಬಗ್ಗೆ ನೆರವು ನೀಡುವಂತೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಕೇಳಲಾಗಿದೆ. ಸಿ.ಆರ್. ಪಿ.ಸಿ.ಯ ಸೆಕ್ಷನ್ 437ಎ ಸಿಂಧುತ್ವ ಪ್ರಶ್ನಿಸಿ ಅಜಯ್ ವರ್ಮ ಎಂಬುವವರು ಅರ್ಜಿ ದಾಖಲಿಸಿದ್ದಾರೆ.

# ಕೆರೆಗಳ ಸಂರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕು




**ಹರಪನಹಳ್ಳಿ ಪೊಲೀಸ್ ವೃತ್ತ ನಿರೀಕ್ಷಕ ನಾಗರಾಜ ಎಂ. ಕಮ್ಮಾರ**

ಹರಪನಹಳ್ಳಿ, ನ. 6 - ನಮ್ಮ ಕೆರೆ, ನಮ್ಮ ಹಕ್ಕಾಗಿದ್ದು, ಕೆರೆಗಳ ಸಂರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಪೊಲೀಸ್ ವೃತ್ತ ನಿರೀಕ್ಷಕ ನಾಗರಾಜ ಎಂ. ಕಮ್ಮಾರ ಹೇಳಿದರು.

ಅವರು ಪುರಸಭೆಯವರು ಕೈಗೊಂಡ ಪಟ್ಟಣದ ಕಾಯಕದಹಳ್ಳಿ ರಸ್ತೆಯಲ್ಲಿರುವ ನಾಯಕನ ಕೆರೆ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

ಕೆರೆ ಎಂದಾಗ ಅದು ಇಡೀ ಪಟ್ಟಣದ ಆಸ್ತಿಯಾಗಿರುತ್ತದೆ, ಇದನ್ನು ಹಾಳು ಮಾಡುವ ಅಧಿಕಾರ ಯಾರಿಗೂ ಇರುವುದಿಲ್ಲ. ಪೂರ್ವಜರು ಕೆರೆಗಳನ್ನು ನಿರ್ಮಿಸಿರುವುದರ ಹಿಂದೆ ವೈಜ್ಞಾನಿಕ ಅಂಶ ವಿರುತ್ತದೆ, ಅಂತರ್ ಜಲ ವೃದ್ಧಿಸುವುದರ ಜೊತೆಗೆ ನೀರಿನ ಸಮಸ್ಯೆ ನೀಗಿಸುತ್ತವೆ, ಮುಂದಿನ ಪೀಳಿಗೆಗೆ ಕೆರೆಗಳ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ ಎಂದರು.

ಕೆರೆಗಳ ಬಳಿ ದಂಡೆ ಮೇಲೆ ತ್ಯಾಜ್ಯ ತಂದು ಹಾಕಬಾರದು, ಬೇಡವಾದ ವಸ್ತುಗಳನ್ನು ಕೆರೆಗಳಲ್ಲಿ ಎಸೆಯುವುದನ್ನು ಯಾರೂ ಮಾಡಬಾರದು. ಕೆರೆ, ಹಳ್ಳ ಕೊಳ್ಳಗಳನ್ನು ನಿರ್ಲಕ್ಷಿಸಿದರೆ ಅದರ ಪರಿಣಾಮವನ್ನು ಪ್ರತಿಯೊಬ್ಬರೂ ಎದುರಿಸಬೇಕಾಗುತ್ತದೆ. ಕೆರೆಗಳನ್ನು ಸ್ವಚ್ಛಗೊಳಿಸುವ ಕಾರ್ಯ ಆಗಿಂದ್ದಾಗ್ಗೆ ಆಗಬೇಕು ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮಾತನಾಡಿ, ಕೆರೆಗಳು ಜನರ ಜೀವನಾಡಿಗಳು, ಕೆರೆಗಳನ್ನು ಮಲಿನಗೊಳಿಸಬಾರದು. ಸತ್ತ ಪ್ರಾಣಿಗಳನ್ನು ತಂದು ಹಾಕುವುದನ್ನು ಯಾರೂ ಮಾಡಬಾರದು, ಮದ್ಯದ ಬಾಟಲಿಗಳನ್ನು ಎಸೆಯುವುದು ಒಟ್ಟಿನಲ್ಲಿ ತ್ಯಾಜ್ಯಗಳನ್ನು ಹಾಕಿ ಕೆರೆಗಳನ್ನು ಹಾಳು ಮಾಡಬಾರದು ಎಂದು ತಿಳಿಸಿದರು.

ನೀರಿನ ಮಹತ್ವ, ಜಲ ಸಂರಕ್ಷಣೆ ಹಾಗೂ ಪರಿಸರ ಕಾಪಾಡುವ ಕುರಿತು ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಈ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮುಂದೆಯೂ ಇಂತಹ ಸ್ವಚ್ಛತಾ ಅಭಿಯಾನ ನಡೆಯುತ್ತವೆ. ಅದಕ್ಕೆ ಸಾರ್ವಜನಿಕರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕೈಜೋಡಿಸಬೇಕು ಎಂದು ಅವರು ಹೇಳಿದರು.

ಶಿಕ್ಷಕರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್ ಮಾತನಾಡಿ, ಕೆರೆ-ಕಟ್ಟೆಗಳು, ಹಳ್ಳ-ಕೊಳ್ಳ ಮನುಷ್ಯನ ಅವಿಭಾಜ್ಯ ಅಂಗಗಳು, ಕೆರೆಗಳು ಹಳ್ಳಿಯ ಆರ್ಥಿಕ ಮತ್ತು ಸಾಮಾಜಿಕ ಕೇಂದ್ರ ಬಿಂದುವಾಗಿ ಹಳ್ಳಿಯ ಜನ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಕೃಷಿಗಾಗಿ ನೀರಾವರಿ ಸೌಲಭ್ಯ ಒದಗಿಸುವಲ್ಲಿ ಹಿಂದಿನಿಂದಲೂ ಪ್ರಮುಖ ಪಾತ್ರ ವಹಿಸುತ್ತಾ ಬಂದಿವೆ. ಆದ್ದರಿಂದ ಕೆರೆಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ ಯಾಗಿದೆ ಎಂದು ತಿಳಿಸಿದರು.

ನೌಕರರ ಸಂಘ, ಶಿಕ್ಷಕರ ಸಂಘ, ವೈದ್ಯಕೀಯ ಸಂಘ, ಪ್ರಕೃತಿ ಪಂಥ, ಜೀವ ಜಲ ಟ್ರಸ್ಟ್, ಜೀವ ವಿಮಾ ಪ್ರತಿ ನಿಧಿಗಳ ಸಂಘ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಸ್ವಚ್ಛತಾ ಅಭಿಯಾನ ಕೈಗೊಂಡರು.

ಸ್ತ್ರೀ ರೋಗ ತಜ್ಞ ಡಾ. ಮಹೇಶ್, ಶಿಕ್ಷಕರ ಸಂಘದ ಕಾರ್ಯದರ್ಶಿ ಷರೀಫ, ಮನ್ಸೂರ್ ಅಹ್ಮದ್, ಬಿ. ರಾಜಶೇಖರ್, ಚಂದ್ರಮೌಳಿ, ಸುಬ್ಬಣ್ಣ, ಪರಶುರಾಮ, ಜೀವಜಲ ಟ್ರಸ್ಟ್‌ನ ಹೇಮಣ್ಣ ಮೋರಗೇರಿ, ರವೀಂದ್ರ ಅಧಿಕಾರ, ಪ್ರಾಚಾರ್ಯ ಎಚ್. ಮಲ್ಲಿಕಾರ್ಜುನ, ಡಾ. ಸಂಗೀತ ಭಾಗವತ್, ಕಿಷನ್ ಭಾಗವತ್, ಸಿದ್ದಪ್ಪ ಹರಿಂದ್ರಾಳ್, ಉಪನ್ಯಾಸಕ ಕೃಷ್ಣಮೂರ್ತಿ, ಬಿಸಿಎಂ ಇಲಾಖೆಯ ಬಿ.ಎಚ್.ಚಂದ್ರಪ್ಪ, ಪುರಸಭೆ ಆರೋಗ್ಯ ನಿರೀಕ್ಷಕ ಮಂಜುನಾಥ ಸೇರಿದಂತೆ ಅನೇಕರು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

## ಕೆಪಿಎಸ್‌ಸಿ ಪರೀಕ್ಷಾರ್ಥಿಗಳಿಗೆ ಅವಮಾನ ಖಂಡನೀಯ

ದಾವಣಗೆರೆ, ನ. 06 - ಕೆಪಿಎಸ್‌ಸಿ ಪರೀಕ್ಷೆಯಲ್ಲಿನ ಅಕ್ರಮ ತಡೆಯುವ ನಿಟ್ಟಿನಲ್ಲಿ ಪರೀಕ್ಷೆ ಬರೆಯುವ ಮಹಿಳಾ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗುವಾಗ ಅವರ ತಾಳಿ, ಕಾಲು, ಉಂಗುರ, ಹಾಗೂ ಕಿವಿ ಒಲೆಯನ್ನು ತೆಗೆಸುವ ಮೂಲಕ ಪರೀಕ್ಷಾರ್ಥಿಗಳಿಗೆ ಅವಮಾನ ಮಾಡಿದ್ದಾರೆ.

ಇದನ್ನು ಮಾಡುವ ಸಮಯದಲ್ಲಿ ಕರ್ತವ್ಯದಲ್ಲಿದ್ದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಮತ್ತು ಎಂದೂ ಇಲ್ಲದ ಈ ಕಾನೂನನ್ನು ಜಾರಿಗೆ ತಂದಿರುವವರಾದರು ಯಾರು? ಎಂದು ಬಿಜೆಪಿ ಕಾನೂನು ಪ್ರಕೋಷ್ಟ ಜಿಲ್ಲಾ ಸಂಚಾಲಕ ಹೆಚ್. ದಿವಾಕರ್ ಮತ್ತು ರಾಜ್ಯ ಸಮಿತಿ ಸದಸ್ಯ ಎ. ಸಿ. ರಾಘವೇಂದ್ರ ಖಂಡಿಸಿದ್ದಾರೆ.

### ನಾಲವತ್ವಾಡ್ (ಹುಂಡೇಕಾರ್) ಸಂತೋಷ ನಿಧನ



ದಾವಣಗೆರೆ ಅಶೋಕ ನಗರದ ಕರಿಬಸವೇಶ್ವರ ದೇವಸ್ಥಾನದ ಹತ್ತಿರದ ವಾಸಿ ಹುಂಡೇಕಾರ್ ರಾಜಶೇಖರ ಇವರ ಮಗನಾದ ನಾಲವತ್ವಾಡ್ (ಹುಂಡೇಕರ್) ಸಂತೋಷ (40) ಇವರು ದಿನಾಂಕ : 06.11.2023ರ ಸೋಮವಾರ ಮಧ್ಯಾಹ್ನ 3.30 ಕ್ಕೆ ನಿಧನರಾದರು. ಮೃತರು ತಂದೆ-ತಾಯಿ, ಪತ್ನಿ, ಇಬ್ಬರು ಪುತ್ರರು, ಸಹೋದರ ಹಾಗೂ ಅಪಾರ ಬಂಧು-ಬಳಗ, ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 07.11.2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಆಲೂರು ಸಾವಪ್ಪ ಹನುಮಮ್ಮ ನಿಧನ



ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ವಾಸಿ ದಿ. ಸಾವಪ್ಪ ಮುನಿಯಪ್ಪನವರ ಧರ್ಮಪತ್ನಿ ಸಾವಪ್ಪ ಶ್ರೀಮತಿ ಹನುಮಮ್ಮ (83) ಇವರು ದಿನಾಂಕ 06.11.2023ನೇ ಸೋಮವಾರ ರಾತ್ರಿ 8.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.11.2023ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಪಶ್ಚಿಮ ಏಷಿಯಾ ಬಗ್ಗೆ ಮೋದಿ, ಇರಾನ್ ಅಧ್ಯಕ್ಷ ರೈಸಿ ಮಾತುಕತೆ**
ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಇರಾನ್ ಅಧ್ಯಕ್ಷ ಸೈಯದ್ ಎಬ್ರಾಹಿಮ್ ರೈಸಿ ಅವರು ಪಶ್ಚಿಮ ಏಷಿಯಾದ ಕಠಿಣ ಪರಿಸ್ಥಿತಿ ಕುರಿತು ಚರ್ಚಿಸಿದ್ದಾರೆ. ಈ ವಲಯದಲ್ಲಿ ನಡೆದಿರುವ ಉಗ್ರವಾದಿ ಘಟನೆಗಳು, ಹಿಂಸಾಚಾರ ಹಾಗೂ ನಾಗರಿಕರ ಸಾವುಗಳ ಬಗ್ಗೆ ಪ್ರಧಾನಿ ಮೋದಿ ಕಳವಳ ವ್ಯಕ್ತಪಡಿಸಿದ್ದಾರೆ.

**ಇಂದು ಛತ್ತೀಸ್‌ಘಡದಲ್ಲಿ ಮೊದಲ ಸುತ್ತಿನ ಮತದಾನ**
ರಾಯಪುರ : ಛತ್ತೀಸ್‌ಘಡ ವಿಧಾನಸಭಾ ಚುನಾವಣೆಗೆ ಮಂಗಳವಾರ ಮೊದಲ ಸುತ್ತಿನ ಮತದಾನ ನಡೆಯಲಿದೆ. 20 ಸೀಟುಗಳಿಗೆ ಮತದಾನ ನಡೆಯಲಿದ್ದು, ಹಲವು ನಕ್ಸಲ್ ಪೀಡಿತ ಬಸ್ತಾರ್ ವಲಯದಲ್ಲಿವೆ. ಈ ಹಿನ್ನೆಲೆಯಲ್ಲಿ ಭದ್ರತೆಗಾಗಿ 25,249 ಸಿಬ್ಬಂದಿಯನ್ನು ನೇಮಿಸಲಾಗಿದೆ.

**ದೆಹಲಿಯಲ್ಲಿ ವಾಯುಮಾಲಿನ್ಯ ತೀವ್ರ, ಸರಿ - ಬೆಸ ನಿಯಮ ಅಳವಡಿಕೆ**
ನವದೆಹಲಿ : ರಾಜಧಾನಿ ದೆಹಲಿಯಲ್ಲಿ ವಾಯು ಮಾಲಿನ್ಯ ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ನವೆಂಬರ್ 10ರವರೆಗೆ ಹತ್ತು ಹಾಗೂ 12 ನೇ ತರಗತಿ ಹೊರತು ಪಡಿಸಿ ಉಳಿದ ತರಗತಿಗಳ ನೇರ ಪಾಠ ರದ್ದುಗೊಳಿಸಲಾಗಿದೆ. ನವೆಂಬರ್ 13ರಿಂದ 20ರವರೆಗೆ ವಾಹನಗಳ ಸಂಚಾರಕ್ಕೆ ಸರಿ - ಬೆಸ ನಿಯಮ ಅಳವಡಿಕೆ ಮಾಡಲಾಗಿದೆ.

**ನೇಪಾಳದಲ್ಲಿ ಮತ್ತೆ ಭೂಕಂಪ**
ನವದೆಹಲಿ : ನೇಪಾಳದಲ್ಲಿ ಸೋಮವಾರ ರಿಕ್ಟರ್ ಮಾಪಕದಲ್ಲಿ 5.6ರಷ್ಟಿದ್ದ ಭೂಕಂಪ ಸಂಭವಿಸಿದೆ. ಉತ್ತರ ಭಾರತದ ಹಲವೆಡೆ ನೆಲ ನಡುಗಿದ ಅನುಭವವಾಗಿದೆ. ಕಳೆದ ಶುಕ್ರವಾರ ನೇಪಾಳದಲ್ಲಿ ಸಂಭವಿಸಿದ ಭೂಕಂಪದಲ್ಲಿ 157 ಜನ ಸಾವನ್ನಪ್ಪಿದ್ದರು.

**ಬಂಧನಕ್ಕೊಳಗಾದರೂ ಸಿಎಂ ಗಾದಿಯಲ್ಲೇ ಇರಲು ಕೇಜ್ರಿವಾಲ್‌ಗೆ ಶಾಸಕರ ಆಗ್ರಹ**
ನವದೆಹಲಿ : ಅಬಕಾರಿ ನೀತಿಗೆ ಸಂಬಂಧಿಸಿದ ಅಕ್ರಮ ಹಣ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಮನ್ಸ್ ಕಳಿಸಿದೆ. ಈ ಹಿನ್ನೆಲೆಯಲ್ಲಿ ಕೇಜ್ರಿವಾಲ್ ಅವರು ಪಕ್ಷದ ಎಲ್ಲಾ ಶಾಸಕರ ಸಭೆ ಕರೆದಿದ್ದರು. ಜಾರಿ ನಿರ್ದೇಶನಾಲಯ ಬಂಧಿಸಿದರೂ ಸಹ ಕೇಜ್ರಿವಾಲ್ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂದು ಎಲ್ಲಾ ಶಾಸಕರು ಒತ್ತಾಯಿಸಿದ್ದಾರೆ ಎಂದು ಆಮ್ ಆದ್ಮಿ ಪಾರ್ಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

**ನಿಷೇಧ ಪ್ರಶ್ನಿಸಿದ್ದ ಪಿ.ಎಫ್.ಐ. ಅರ್ಜಿ ವಜಾ**
ನವದೆಹಲಿ : ಅಕ್ರಮ ಚಟುವಟಿಕೆ ತಡೆ ಕಾಯ್ದೆ ಅನ್ವಯ ಪಿ.ಎಫ್.ಐ. ಮೇಲೆ ಕೇಂದ್ರ ಸರ್ಕಾರ ಹೇರಿದ್ದ ನಿಷೇಧವನ್ನು ಯು.ಎ.ಪಿ.ಎ. ಟ್ರಿಬ್ಯೂನಲ್ ಎತ್ತಿ ಹಿಡಿದಿತ್ತು. ಟ್ರಿಬ್ಯೂನಲ್ ಆದೇಶ ಪ್ರಶ್ನಿಸಿ ಪಿ.ಎಫ್.ಐ. ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

# ಕನ್ನಡದ ಮೇಲಿನ ದಬ್ಬಾಳಿಕೆ ತಡೆಗೆ ಒಟ್ಟಾಗಿ ಹೋರಾಡಬೇಕು

## ಸಿರಿಗೆರೆಯಲ್ಲಿನ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಸಾಪ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಕರೆ

ಸಿರಿಗೆರೆ, ನ. 6- ಸಿರಿಗೆರೆ ತರಳಬಾಳು ಜಗದ್ಗುರು ಬೃಹನ್ಮಠವು ಕನ್ನಡ ಭಾಷೆಗೆ ತುಡಿಯುವ ಮಠವಾಗಿರುವುದರಿಂದ, ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ಪ್ರತಿ ವರ್ಷವೂ ನಾಡಹಬ್ಬವಾಗಿ ಜರುಗಲಿದೆ ಎಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಹೇಳಿದರು.



ಇಲ್ಲಿನ ಲಿಂ. ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ ವಿದ್ಯಾರ್ಥಿ ನಿಲಯದ ಒಳಾಂಗಣದ ವೇದಿಕೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಅನ್ನ ದಾಸೋಹ ಹಾಗೂ ಜ್ಞಾನ ದಾಸೋಹವನ್ನು ಉಣಬಡಿಸುತ್ತಿರುವ ಸಿರಿಗೆರೆ ತರಳಬಾಳು ಜಗದ್ಗುರು ಬೃಹನ್ಮಠವು ರಾಜ್ಯೋತ್ಸವವನ್ನು ಇಷ್ಟು ವಿಜೃಂಭಣೆಯಿಂದ ಆಚರಿಸುತ್ತಿರುವುದು ಹೆಮ್ಮೆಯ ವಿಚಾರ. ಪಾಶ್ಚಾತ್ಯ ಭಾಷೆಗಳಿಂದ ಕನ್ನಡದ ಮೇಲೆ ದಬ್ಬಾಳಿಕೆ ಹೆಚ್ಚಾಗುತ್ತಿದೆ. ಕನ್ನಡ ಭಾಷೆಯ ಸೊಬಗನ್ನು ಸವಿಯುವ ನಾವೆಲ್ಲರೂ ಒಟ್ಟಾಗಿ ಹೋರಾಡ ಬೇಕಾಗಿದೆ. ಬೆಂಗಳೂರಿನ ಕಮೀಷನರ್ ಆಗಿದ್ದ ಕಬ್ಬನ್ ಅವರು ಪೂರ್ಣ ಕನ್ನಡದಲ್ಲಿ ಆಡಳಿತ ಮಾಡಿದ್ದರ ಫಲವಾಗಿ ಅವರ ಹೆಸರಿನಲ್ಲಿ ಕಬ್ಬನ್ ಪಾರ್ಕ್ ಎಂದು ನಾಮಕರಣ ಮಾಡಲಾಗಿದೆ. ಸರ್ ವಿಶ್ವೇಶ್ವರಯ್ಯನವರೂ ಸಹ ಕನ್ನಡ ಸಾಹಿತ್ಯ ಪರಿಷತ್ ಬೆಳೆಯಲು ಸಹಕರಿಸಿದವರಲ್ಲಿ ಪ್ರಮುಖರು ಎಂದು ತಿಳಿಸಿದರು.

ಸಾನಿಧ್ಯ ವಹಿಸಿದ್ದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಾತೃ ಭಾಷೆ ಕನ್ನಡವನ್ನು ಆಂಗ್ಲ ಭಾಷೆಯ ಜೊತೆಗೆ ಕಲಬೆರಕೆ ಮಾಡದೇ ಶುದ್ಧ ಕನ್ನಡ ಮಾತನಾಡುವಲ್ಲಿ ನಿಮ್ಮೆಲ್ಲರ ಹೊಣೆಗಾರಿಕೆ ಇರಲಿ. ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುವ ಪ್ರೊಫೆಸರ್‌ಗಳು ಗಡಿನಾಡಿನ ಆಚೆಗೂ ಕನ್ನಡ ಪಸರಿಸಬೇಕು. ವಿದೇಶದ ವಿಶ್ವವಿದ್ಯಾನಿಲಯಗಳ ಜೊತೆಗೆ ಶಿಕ್ಷಣ ಪಡೆಯುವ ವಿನಿಮಯ ಯೋಜನೆಗೆ ಸರ್ಕಾರದ ವತಿಯಿಂದ 5 ಕೋಟಿ ರೂಪಾಯಿ ಮಂಜೂರು ಮಾಡಿಸಿದ್ದ ಸಂದರ್ಭವನ್ನು ನೆನಪಿಸಿದರು. ಅಧ್ಯಕ್ಷರಾದ ಮಹೇಶ್ ಜೋಶಿ ಅವರು ಈ ಯೋಜನೆಯನ್ನು ಪುನರ್ ಸ್ಥಾಪಿಸಿ ವಿದೇಶದಲ್ಲಿಯೂ ಕನ್ನಡದ ಕಂಪು ವಿಸ್ತರಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆ ಕ.ಸಾ.ಪ ಅಧ್ಯಕ್ಷ ಸುರಿ ಶ್ರೀನಿವಾಸ್ ಮಾತನಾಡಿ, ಕನ್ನಡ ನಾಡಹಬ್ಬ ನಿರಂತರವಾಗಿ ಶ್ರೀಮಠದಲ್ಲಿ ನಡೆಯಲಿ. ಕನ್ನಡ ಮಾಧ್ಯಮದಲ್ಲಿ ಓದುವವರಿಗೆ ಎಲ್ಲಾ ಸೌಲಭ್ಯಗಳು ಸಿಗಲಿ. ಸಿರಿಗೆರೆಯ ಸಂಸ್ಕಾರ ವಿದ್ಯಾರ್ಥಿಗಳಲ್ಲಿ ಕನ್ನಡ ಶಕ್ತಿಯನ್ನು ತುಂಬುತ್ತದೆ. ಕಲೆ, ಸಾಹಿತ್ಯ, ಸಂಗೀತ, ಶೈಕ್ಷಣಿಕವಾಗಿ ಶ್ರೀಮಠದ ಕೊಡುಗೆ ಅಪಾರ. ಕನ್ನಡ ಶಾಲೆಗಳು ಉಳಿಯುವುದಕ್ಕೆ ಶ್ರೀಮಠವೂ ಸಹಕರಿಸುತ್ತಿದೆ ಎಂದರು.

ದಾವಣಗೆರೆ ಜಿಲ್ಲಾ ಕ.ಸಾ.ಪ ಅಧ್ಯಕ್ಷ ಬಿ.ವಾಮದೇವಪ್ಪ, ಚಿತ್ರದುರ್ಗ ಜಿಲ್ಲಾ ಕ.ಸಾ.ಪ ಅಧ್ಯಕ್ಷ ಕೆ.ಎಂ.ಶಿವಸ್ವಾಮಿ ಮತ್ತಿತರರಿಗೆ ಗೌರವ ಸಮರ್ಪಣೆ ಸಲ್ಲಿಸಲಾಯಿತು,

ಮೈಸೂರಿನ ಡಾ. ಶ್ವೇತ ಮಡಪ್ಪಾಡಿ ತಂಡ ಸುಮಧುರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ನೌಕರರಿಗಾಗಿ ನಡೆದ ರಸಪ್ರಶ್ನೆ ಕಾರ್ಯಕ್ರಮವನ್ನು ಶ್ರೀ ಗುರುಶಾಂತೇಶ್ವರ ಭವನದಲ್ಲಿ ಸಹಶಿಕ್ಷಕ ಎಂ.ರಂಗಣ್ಣ ತಂತ್ರಜ್ಞಾನದ ಸಹಾಯದಿಂದ ಬಿತ್ತರಿಸಿದರು. ಕೆ.ಇ.ಬಸವರಾಜು, ನಾಗರಾಜು ಸಿರಿಗೆರೆ ಹಾಗೂ ಎಸ್.ಆರ್.ಮಲ್ಲಿಕಾರ್ಜುನ್ ಅವರು ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು.

ರಸಪ್ರಶ್ನೆ ಸ್ಪರ್ಧೆಯಲ್ಲಿ ಡಾ. ಹೆಚ್. ಓಂಕಾರನಾಯ್ಕ ಮತ್ತು ಸವಿತಾ ಪಾಟೀಲ (ಪ್ರಥಮ), ಸಿ.ಎಸ್.ಬಸವರಾಜಪ್ಪ ಮತ್ತು ಜಿ.ಎಚ್.ಆಶಾ (ದ್ವಿತೀಯ) ಹಾಗೂ ಎಂ.ಎಂ.ಭಾಸ್ಕರಾಚಾರ್ಯ ಮತ್ತು ಶಿವಾನಂದ ಬಣಕಾರ (ತೃತೀಯ ಸ್ಥಾನ) ಪಡೆದರು.

# ಡಿನ್ನರ್ -ಬ್ರೇಕ್‌ಫಾಸ್ಟ್ ಸಭೆಗಳಲ್ಲಿ ಬರ ಕಾಮಗಾರಿ ವಿಫಲ

ಬೆಂಗಳೂರು, ನ. 6 - ವರ್ಗಾ ವಣೆ ದಂಧೆ, ಕಮೀಷನ್ ವಸೂಲಿ, ಆಪರೇಷನ್ ಹಸ್ತ, ಡಿನ್ನರ್- ಬ್ರೇಕ್‌ಫಾಸ್ಟ್ ಸಭೆಗಳನ್ನು ನಡೆಸಿ ಕೊಂಡಿರುವ ಮುಖ್ಯಮಂತ್ರಿ ಸಿದ್ದರಾ ಮಯ್ಯ, ಬರ ಪರಿಹಾರ ಕಾಮಗಾರಿ ಕೈಗೊಳ್ಳಲು ವಿಫಲರಾಗಿದ್ದಾರೆಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿ ಕಾರಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ನೀವು ರಾಜ್ಯದ ಮುಖ್ಯಮಂತ್ರಿ. ದೆಹಲಿಗೆ ತೆರಳಿ ಪ್ರಧಾನಿಗಳಿಗೆ ವಸ್ತುಸ್ಥಿತಿ ಮನವರಿಕೆ ಮಾಡಿಕೊಡಬೇಕಿತ್ತು. ಅದನ್ನು ಮಾಡಲಿಲ್ಲ. ಪ್ರತಿಷ್ಠೆ ನಿಮಗೆ. ಪ್ರಧಾನಿಗಳನ್ನು ಸದಾ ನಿಂದಿಸುತ್ತಾ ಕುಳಿತು ಇಲ್ಲಿ ದಂಧೆಯಲ್ಲೇ ತೊಡಗಿದರೆ ಏನು ಪ್ರಯೋಜನ ಎಂದು ಟೀಕಿಸಿದ್ದಾರೆ. ಕೇವಲ ವಸೂಲಿಗಾಗಿ ನಿರಂತರ ಸಭೆಗಳನ್ನು ಮಾಡುವುದಲ್ಲದೆ, ಆಪರೇಷನ್ ಹಸ್ತ ಮಾಡಲು ಸಚಿವರಿಗೆ ಟಾರ್ಗೆಟ್ ನೀಡುತ್ತೀರಿ. ಅದರ ಬದಲು ಬರ ಪರಿಹಾರದ ಟಾರ್ಗೆಟ್ ನೀಡಬಾರದೇಕೆ ಎಂದು ಪ್ರಶ್ನಿಸಿದ್ದಾರೆ.

# ಮೇರು ವ್ಯಕ್ತಿತ್ವದ ನಾಗಮ್ಮ ಕೇಶವಮೂರ್ತಿ

ದಾವಣಗೆರೆ, ನ. 6- ಮಾಜಿ ಸಚಿವರೂ, ವನಿತಾ ಸಮಾಜದ ಸಂಸ್ಥಾಪಕರೂ ಆದ ಡಾ. ನಾಗಮ್ಮ ಕೇಶವಮೂರ್ತಿ ಅವರೊಂದು ಸಂಸ್ಥೆ ಇದ್ದಂತೆ, ಮೇರು ವ್ಯಕ್ತಿತ್ವವುಳ್ಳ ಅವರ ಸಮಾಜ ಸೇವಾ ಕಾರ್ಯ ಶ್ಲಾಘನೀಯ ಎಂದು ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.



ನಗರದ ರೋಟರಿ ಬಾಲಭವನದಲ್ಲಿ ದಾವಣಗೆರೆ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ಹಾಗೂ 'ಜನತಾವಾಣಿ' ದಿನ ಪತ್ರಿಕೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 68 ನೇ ಕನ್ನಡ ರಾಜ್ಯೋತ್ಸವ, 29 ನೇ ವಾರ್ಷಿಕೋತ್ಸವ, ಪುಸ್ತಕ ಬಿಡುಗಡೆ ಹಾಗೂ 'ಜಿಲ್ಲಾ ವನಿತಾ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ವನಿತಾ ಸಮಾಜದ ಅಡಿಯಲ್ಲಿ 50ಕ್ಕೂ ಹೆಚ್ಚು ಅಂಗ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಾ ಬಂದಿರುವ ನಾಗಮ್ಮ ಕೇಶವಮೂರ್ತಿ ಅವರ ಸೇವೆ ಅನನ್ಯವಾದುದು ಎಂದರು.

ಅವರ ಮಾರ್ಗದರ್ಶನ ಸದಾ ಹೀಗೆ ಇರಲಿ, ವನಿತಾ ಸಮಾಜ ಇನ್ನೂ ಹೆಚ್ಚಿನ ಪ್ರಗತಿಯತ್ತ ದಾಪುಗಾಲು ಇಡಲಿ ಎಂದು ಶುಭ ಹಾರೈಸಿದರು.

### ವನಿತಾ ಸಮಾಜ ಕಾರ್ಯಕ್ರಮದಲ್ಲಿ ಪ್ರಭಾ ಮಲ್ಲಿಕಾರ್ಜುನ್ ಶ್ಲಾಘನೆ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಕೆ. ಶರೀಫಾ ಅವರ ಸಾಹಿತ್ಯ ಸೇವೆ ಪ್ರಶಂಸನೀಯ. ಅವರ ಸಾಧನೆ ಮಹಿಳೆಯರಿಗೆ ಸ್ಫೂರ್ತಿ ಎಂದು ಹೇಳಿದರು. ಎಸ್.ಎಸ್. ಕೇರ್ ಟ್ರಸ್ಟ್ ಕೂಡ ಮಹಿಳೆಯರ ಸಬಲೀಕರಣದ ಹಿನ್ನೆಲೆಯಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ ಎಂದು ತಿಳಿಸಿದರು.

# ಭಾರತದಲ್ಲಿ ಬಡತನ ಇಳಿಕೆ, ಮಧ್ಯಮ ವರ್ಗದವರ ಏರಿಕೆ

ನವದೆಹಲಿ, ನ. 6 – ಭಾರತ ವಿಶ್ವದ ಅತಿ ಹೆಚ್ಚಿನ ಆದಾಯ ಅಸಮಾನತೆ ಹೊಂದಿರುವ ದೇಶಗಳಲ್ಲಿ ಒಂದಾಗಿದೆ ಎಂದು ಯು.ಎನ್.ಡಿ.ಪಿ. ವರದಿ ತಿಳಿಸಿದೆ.



2024 ಏಷಿಯಾ - ಪೆಸಿಫಿಕ್ ಮಾನವ ಅಭಿವೃದ್ಧಿ ವರದಿಯನ್ನು ಸೋಮವಾರ ಬಿಡುಗಡೆ ಮಾಡಲಾಗಿದೆ. ಮಾನವ ಅಭಿವೃದ್ಧಿಗಾಗಿ ಹೊಸ ದಾರಿಯ ಅಗತ್ಯವಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

2015-16 ರಿಂದ 2019-21ರ ನಡುವೆ ಭಾರತದಲ್ಲಿ ಬಹುಮುಖಿ ಬಡತನದ ಪ್ರಮಾಣ ಶೇ.25ರಿಂದ 15ಕ್ಕೆ ಇಳಿಕೆಯಾಗಿದೆ ಎಂದು ಇದೇ ವರದಿಯಲ್ಲಿ ತಿಳಿಸಲಾಗಿದೆ.

2000 ದಿಂದ 2022ರ ನಡುವೆ ಭಾರತದ ತಲಾ ವರಮಾನ 442 ಡಾಲರ್‌ಗಳಿಂದ 2,389 ಡಾಲರ್‌ಗಳಿಗೆ ಹೆಚ್ಚಾಗಿದೆ. 2004 ರಿಂದ 2019ರ ನಡುವೆ ಬಡತನದ ಪ್ರಮಾಣ ಶೇ.40 ರಿಂದ ಶೇ.10ಕ್ಕೆ ಇಳಿಕೆಯಾಗಿದೆ ಎಂದು ವರದಿ ಹೇಳಿದೆ.

2015-16ರಿಂದ 2019-21ರ ನಡುವೆ ಬಹುಮುಖಿ ಬಡತನದಲ್ಲಿ ಬದು ಕುವವರ ಪ್ರಮಾಣ ಶೇ.25ರಿಂದ ಶೇ.15ಕ್ಕೆ ಇಳಿಕೆಯಾಗಿದೆ ಎಂಬುದು ಈ ವರದಿಯಲ್ಲಿನ ಮಹತ್ವದ ಅಂಶವಾಗಿದೆ. ಬಡತನದ ರೇಖೆಗಿಂತ ಸ್ವಲ್ಪವೇ ಮೇಲಿರುವವರು ಸಂಕಷ್ಟದಲ್ಲಿದ್ದಾರೆ. ಅವರು ಮತ್ತೆ ಬಡತನದಲ್ಲಿ ಸಿಲುಕುವ ಅಪಾಯದಲ್ಲಿದ್ದಾರೆ ಎಂದು ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ (ಯು.ಎನ್.ಡಿ.ಪಿ.) ವರದಿ ತಿಳಿಸಿದೆ.

ಶೇ.23ರಷ್ಟು ಮಹಿಳೆಯರು ಮಾತ್ರ ದುಡಿಮೆಯಲ್ಲಿ ತೊಡಗಿದ್ದಾರೆ. ಭಾರತ ವೇಗದ ಬೆಳವಣಿಗೆ ಕಾಣುತ್ತಿದೆಯಾದರೂ, ಆರ್ಥಿಕ ಅಸಮಾನತೆ ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ಜಾಗತಿಕ ಮಧ್ಯಮ ವರ್ಗದವರ ಬೆಳವಣಿಗೆಗೆ ಭಾರತ ಅತಿ ಹೆಚ್ಚಿನ ಕೊಡುಗೆ ನೀಡುತ್ತಿದೆ. ವಿಶ್ವದ ಒಟ್ಟು ಮಧ್ಯಮ ವರ್ಗದವರಲ್ಲಿ ಭಾರತ ಶೇ.24ರಷ್ಟು ಪಾಲು ಹೊಂದಿದೆ ಎಂದೂ ವರದಿ ತಿಳಿಸಿದೆ.

# ಕೇಂದ್ರದಿಂದ 27.50 ರೂ. ದರದಲ್ಲಿ ಗೋಧಿ ಹಿಟ್ಟು

**(1ನೇ ಪುಟದಿಂದ)** ಯಾಗಿದೆ. ಈಗ ಔಪಚಾರಿಕವಾಗಿ ದೇಶಾದ್ಯಂತ ಗೋಧಿ ಹಿಟ್ಟನ್ನು 27.50 ರೂ. ದರದಲ್ಲಿ ಮಾರುವುದಕ್ಕೆ ಚಾಲನೆ ನೀಡಿದ್ದೇವೆ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಪಿಯೂಶ್ ಗೋಯಲ್ ತಿಳಿಸಿದ್ದಾರೆ. ಉದ್ಘಾಟನೆ ವೇಳೆ ಅವರು 100 ಸಂಚಾರಿ ಮಾರಾಟ ವಾಹನಗಳಿಗೆ ಚಾಲನೆ ನೀಡಿದ್ದಾರೆ.

ಪ್ರಾಯೋಗಿಕ ಹಂತದಲ್ಲಿ ಕೆಲವೇ ಚಿಲ್ಲರೆ ಮಾರಾಟ ತಾಣಗಳ ಮೂಲಕ ಗೋಧಿ ಹಿಟ್ಟು ಮಾರಲಾಗಿತ್ತು. ಈಗ 800 ಸಂಚಾರಿ ವಾಹನಗಳು ಹಾಗೂ 2 ಸಾವಿರ ಕೇಂದ್ರಗಳ ಮೂಲಕ ಗೋಧಿ ಹಿಟ್ಟು ಮಾರಲಾಗುವುದು ಎಂದವರು ತಿಳಿಸಿದ್ದಾರೆ.

ಭಾರತೀಯ ಆಹಾರ ನಿಗಮದ ಮೂಲಕ 2.5 ಲಕ್ಷ ಟನ್ ಗೋಧಿಯನ್ನು 21.50 ರೂ. ದರದಲ್ಲಿ ಪೂರೈಸಲಾಗುವುದು. ಮೂರು ಕೇಂದ್ರೀಯ ಸಂಸ್ಥೆಗಳು ಈ ಗೋಧಿಯನ್ನು ಹಿಟ್ಟಾಗಿಸಿ 27.50 ರೂ. ದರದಲ್ಲಿ ಮಾರಾಟ ಮಾಡಲಿವೆ. ಇದು ಗೋಧಿ ಬೆಲೆ ನಿಯಂತ್ರಣಕ್ಕೆ ನೆರವಾಗಲಿದೆ ಎಂದು ಸಚಿವರು ಹೇಳಿದ್ದಾರೆ.

ಬೇಳೆ, ಟೊಮ್ಯಾಟೋ ಹಾಗೂ ಈರುಳ್ಳಿಗಳನ್ನೂ ಸಹ ಕೇಂದ್ರ ಸರ್ಕಾರ ಸಬ್ಸಿಡಿ ದರದಲ್ಲಿ ಮಾರಾಟ ಮಾಡುತ್ತಿದೆ. ಇದು ಬೆಲೆ ನಿಯಂತ್ರಣಕ್ಕೆ ನೆರವಾಗುತ್ತಿದೆ ಎಂದು ಗೋಯಲ್ ಹೇಳಿದ್ದಾರೆ. ನೆಫೆಡ್ ಹಾಗೂ ಎನ್.ಸಿ.ಸಿ.ಎಫ್. ಮೂಲಕ ತಲಾ ಒಂದು ಲಕ್ಷ ಟನ್ ಗೋಧಿ ಹಿಟ್ಟು ಹಾಗೂ ಕೇಂದ್ರೀಯ ಭಂಡಾರದ ಮೂಲಕ 50 ಸಾವಿರ ಟನ್ ಗೋಧಿ ಹಿಟ್ಟು ಮಾರಾಟ ಮಾಡಲಾಗುವುದು.

# ಶಾಲೆಗಳಲ್ಲಿ ಶೌಚಾಲಯಕ್ಕೆ ರಾಷ್ಟ್ರೀಯ ಮಾದರಿ

**(1ನೇ ಪುಟದಿಂದ)** ನೀತಿ ರೂಪಿಸುವಂತೆಯೂ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ. ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ವಿದ್ಯಾರ್ಥಿನಿಯರಿಗೆ ನೀಡುವ ಬಗ್ಗೆ ರಾಷ್ಟ್ರೀಯ ಕರಡು ನೀತಿಯನ್ನು ರೂಪಿಸಲಾಗಿದೆ. ಈ ಬಗ್ಗೆ ಟಿಪ್ಪಣಿ ಮಾಡುವಂತೆ ಸಂಬಂಧಿಸಿದವರಿಗೆ ರವಾನಿಸಲಾಗಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.


# ಎಲ್ಲಾ ದಾನಗಳಿಗಿಂತ 'ಸಮಾಧಾನ'ವೇ ಶ್ರೇಷ್ಠ ದಾನ

## ಸಾಣೇಹಳ್ಳಿ ರಾಷ್ಟ್ರೀಯ ನಾಟಕೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಶ್ರೀಗಳು

ಸಾಣೇಹಳ್ಳಿ, ನ.6- ಭೂದಾನ, ಬಂಗಾರ ದಾನ, ದೇಹದಾನಗಳಿಗಿಂತ 'ಸಮಾಧಾನ' ಶ್ರೇಷ್ಠ ದಾನವಾಗಿದೆ. ಸಮಾಧಾನದಿಂದ ಸಂತೋಷ, ಸಂತೃಪ್ತಿ ಸಾಧ್ಯ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ನುಡಿದರು.

ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ನಾಟಕೋತ್ಸವದ ಮೂರನೇ ದಿನದ 'ಚಿಂತನ ಗೋಷ್ಠಿ'ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ವ್ಯಕ್ತಿ ಕೋಪ, ತಾಪ, ಚಂಚಲತೆಗಳಿಂದ ವಿಚಲಿತನಾಗದೇ ಸಮಾಧಾನಿಯಾಗಿರಬೇಕು. ದುಡುಕಿನಿಂದ ಕೆಡುಕಾಗುತ್ತದೆ. ಆದ್ದರಿಂದ ಯಾರೂ ದುಡುಕದೇ ಸಮಾಧಾನದಿಂದಿರಬೇಕು. ಲೋಕದಲ್ಲಿ ಜೀವಿಸುವಾಗ ನಾಲ್ಕು ಜನ ಹೊಗಳಿದರೆ, ಇತರೆ 4 ಜನ ತೆಗಳುವವರು ಇರುವುದರಿಂದ ಕೋಪಗೊಳ್ಳದೇ ವಿವೇಕದಿಂದ ಉತ್ತರಿಸಬೇಕು. 'ತನಗೆ ಮುನಿ ವರಿಗೆ ತಾ ಮುನಿಯಲೇಕಯ್ಯ ಅವರಿಗಾದ ಆಗೇನು? ತನಗಾದ ಚೇಗೇನು? ಮನೆಯ ಕಿಚ್ಚು, ಮನೆಯ ಸುಟ್ಟಲ್ಲದೆ ನೆರಮನೆಯ ಸುಡದು' ಎಂಬಂತೆ ಹೊಟ್ಟೆಯ ಕಿಚ್ಚು ಒಳಗಿನ ಕುದಿತ. ಹೊಟ್ಟೆಯ ಕಿಚ್ಚು ತನ್ನನ್ನೇ ಸುಡುವುದು.



ದೇವಾಲಯದಲ್ಲಿನ ವಿಗ್ರಹದ ಕಲ್ಲು ಹಲವು ಉಳಿಪೆಟ್ಟನ್ನು ತಿಂದದ್ದರಿಂದ ಪೂಜನೀಯವಾ ಗಿದೆ. ದೇವಾಲಯದ ಇತರೆ ಕಲ್ಲುಗಳು ತುಳಿತಕ್ಕೆ ಒಳಗಾಗಿವೆ. ವಿವೇಕಿಗಳು ಸಮಾಧಾನದಿಂದ ಇರಬೇಕು. ಇದಕ್ಕಾಗಿ ಸಜ್ಜನರ ಸಂಘ ಮಾಡಬೇಕು ಎಂದು ತಿಳಿಸಿದರು.

ಗಣಪತಿ ನಮ್ಮ ಸಂಸ್ಕೃತಿಯಲ್ಲ. ನಮ್ಮ ಸಂಸ್ಕೃತಿ ಲಿಂಗಾಯತ ಸಂಸ್ಕೃತಿ, ಶರಣ ಸಂಸ್ಕೃತಿ. ಮಹಾನುಭಾವನೊಬ್ಬ ದೊಡ್ಡ ಲೇಖನ ಬರೆದು, ನಮ್ಮಲ್ಲಿ ಇಲ್ಲದ ಗುಣಗಳನ್ನು ಆರೋಪಿಸಿದ್ದಾನೆ. ನಾವು ಗಣಪತಿ ಉತ್ಸವಕ್ಕೆ ಹೋಗುವುದಿಲ್ಲ. ಏಕೆಂದರೆ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಸಿದ್ಧಾಂತದಿಂದ. ನಾವು ನಮ್ಮ ಮತ್ತು ನಮ್ಮ ಸುತ್ತಲಿನವರ ಬದುಕನ್ನು ಸುಂದರಗೊಳಿಸಬೇಕು, ಅದಕ್ಕಾಗಿ ಸೂಕ್ತ ಮಾರ್ಗದರ್ಶನ ಮಾಡುತ್ತೇವೆ. ನಾಡಿನಲ್ಲಿ ಕಂದಾಚಾರದಲ್ಲಿ ಮುಳುಗಿಸುವ ಪುರೋಹಿತಶಾಹಿ ಪರಂಪರೆ ಇದೆ. ಸತ್ಯದ ಅರಿವು ಮೌಢ್ಯದ ಕೂಪದಲ್ಲಿರುವವರಿಗೆ ಅರ್ಥವಾಗುವು ದಿಲ್ಲ. ಸ್ಥಾವರ ದೇವರುಗಳು ಯಾರಿಗೂ ವರ-ಶಾಪ ಕೊಟ್ಟಿಲ್ಲ. ದಿನದ ಆರಂಭದಲ್ಲಿಯೇ ಮಾಧ್ಯಮಗಳಲ್ಲಿ ಜ್ಯೋತಿಷ್ಯ ಪಂಚಾಂಗ ಹೇಳುವಿಕೆಯ ಕಾರ್ಯ ಕ್ರಮಗಳು ಬಿತ್ತರವಾಗುತ್ತಿವೆ. ಜ್ಯೋತಿಷ್ಯ ಪಂಚಾಂಗ ಹೇಳುವವರನ್ನು ಮಾನಸಿಕ ಭಯೋ ತ್ಪಾದಕರು ಎಂದು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ. ಆಗ ಬಾರದ ಟೀಕೆ ಈಗೇಕೆ. ಅವರು ನಮಗೆ ಬುದ್ಧಿ ಹೇಳುವ ಅಗತ್ಯವಿಲ್ಲ.

ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ಬಸವಾದಿ ಶರಣರು ನಮಗೆ ಬುದ್ಧಿ ಹೇಳಿದ್ದಾರೆ. ಕುಚೋದ್ಯದ ಪ್ರೇರಣೆಯಿಂದ ವ್ಯಕ್ತಿತ್ವ ಕಟ್ಟಿಕೊಳ್ಳಲಾಗುವುದಿಲ್ಲ. 'ಶಿರ ಹೊನ್ನ ಕಳಶ' ಎಂಬಂತೆ ಹೊಸ ವೈಚಾರಿಕ ಆಲೋಚನೆಗಳನ್ನು ಕೆಲವರು ಒಪ್ಪಿಕೊಳ್ಳುವುದಿಲ್ಲ. ಅವರಿಗೆ ಇತರರ ತಲೆ ಬೋಳಿಸುವುದೇ ಕೆಲಸವಾಗಿದೆ.

ನಮಗೆ 2004ರಲ್ಲಿಯೇ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಕರ್ನಾಟಕದಲ್ಲಿ ಮಠಾಧೀಶರಿಗೆ ಸಂದ ಮೊದಲ ಪ್ರಶಸ್ತಿ. ರಾಜ್ಯೋತ್ಸವ ಪ್ರಶಸ್ತಿ ಮತ್ತು ಪ್ರಚಾರಕ್ಕಾಗಿ ನಾವು ಮಾತಾಡುವುದಿಲ್ಲ. ನಮಗೆ ಪ್ರಶಸ್ತಿ, ಪುರಸ್ಕಾರಗಳು ಬೇಕಿಲ್ಲ.

ಶಿಕ್ಷಕ ಬಸನಗೌಡ ಪೊಲೀಸ್ ಪಾಟೀಲ್ 'ಸಮಾಧಾನಿಯಾಗಿರಬೇಕು' ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಮಾನವ ಒತ್ತಡಗಳಿಗೆ ಒಳಗಾಗಬಾರದು. ಸಮಾಧಾನದಿಂದ ಬದುಕನ್ನು ಸಾಗಿಸಬೇಕು. ತಾಳ್ಮೆಯಿಂದ ಜೀವನ ನಡೆಸಬೇಕು. ಆಗ ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯುತ್ತದೆ ಎಂದರು.

ಎಚ್. ಎಸ್. ನಾಗರಾಜ್ ಮತ್ತು ಕೆ. ಜ್ಯೋತಿ ವಚನ ಪ್ರಾರ್ಥನೆ ಮಾಡಿದರು. ಶಿಕ್ಷಕಿ ಎನ್. ಆರ್ ಕಾವ್ಯ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು.

# ಮಾರ್ಚ್ ಚುನಾವಣೆಗೆ ಸ್ಪರ್ಧಿಸಲಿರುವ ಪುತಿನ್

ಮಾಸ್ಕೋ, ನ. 6 – ಮುಂಬರುವ ಮಾರ್ಚ್ ತಿಂಗಳಲ್ಲಿ ಚುನಾವಣೆ ಎದುರಿಸಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ನಿರ್ಧರಿಸಿದ್ದಾರೆ. ಈ ಚುನಾವಣೆಯಲ್ಲಿ ಗೆದ್ದಲ್ಲಿ ಅವರು 2030ರವರೆಗೆ ಅಧಿಕಾರದಲ್ಲಿ ಮುಂದುವರೆಯಲಿದ್ದಾರೆ ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಪುತಿನ್ ಮುಂದಿನ ಚುನಾವಣೆಗಾಗಿ ಅವರ ಸಲಹೆಗಾರರು ಸಿದ್ಧತೆ ಆರಂಭಿಸಿದ್ದಾರೆ. ಮುಂದಿನ ಕೆಲ ವಾರಗಳಲ್ಲಿ ಈ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ರಾಯಿಟರ್ಸ್ ಹೇಳಿದೆ.


**ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ಜಿಲ್ಲಾಧಿಕಾರಿಗಳವರ ಕಛೇರಿ, ದಾವಣಗೆರೆ**
**ಭೂಮಿ ಅಪೀಲು ನಂ: 988 /2023-24**

ಅಪೀಲುದಾರರು : ಶ್ರೀ ಜಿ. ಗುರುಲಿಂಗಪ್ಪ - ವಿರುದ್ಧ -
ಎದುರುದಾರರು : ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ತಾ||, ದಾವಣಗೆರೆ. & ಇತರರು.
ಎದುರುದಾರರು : 5) ಶ್ರೀ ಸತೀಶ್ ಜಿ.ಬಿ. ಬಿನ್' ವಾಮದೇವಪ್ಪ, ವಯಸ್ಸು ಸುಮಾರು 40 ವರ್ಷ.
6) (ಎ) ಶ್ರೀ ಬಸವರಾಜಪ್ಪ ಬಿನ್ ಕುರ್ಕಿ ಸಿದ್ಧಬಸಪ್ಪ ವಯಸ್ಸು ಸುಮಾರು 60 ವರ್ಷ
7) ಶ್ರೀ ಕೆ.ಬಿ.ಶಿವಕುಮಾರ್ ಬಿನ್ ಬಸಪ್ಪ. ಕೆ., ವಯಸ್ಸು ಸುಮಾರು 40 ವರ್ಷ, ಮೇಲ್ಕಂಡ ಎಲ್ಲರ ವಾಸ: ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ಅಪೀಲುದಾರರು ಎದುರುದಾರರ ವಿರುದ್ಧ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರಿ.ಸ.ನಂ.184 ಜಮೀನಿಗೆ ಸಂಬಂಧಪಟ್ಟಂತೆ 1ನೇ ಎದುರುದಾರರು ಈ ಹಿಂದೆ ಮಾಡಿದ ಪೋಡು ದುರಸ್ತುಗಳನ್ನು ರದ್ದುಪಡಿಸಲು ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು, ಮೇಲ್ಕಂಡ ಎದುರುದಾರರಿಗೆ ನ್ಯಾಯಾಲಯದಿಂದ ಹೊರಡಿಸಲಾಗಿರುವ ಸಮನ್ಸ್/ನೋಟೀಸ್ ಹಾಗೂ ಅಂಚೆ ನೋಟೀಸ್ ಇತ್ಯಾದಿಗಳನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೇ ಹಿಂದಿರುಗಿಸಿರುವ ಪ್ರಯುಕ್ತ ತಮಗೆ ಸಾರ್ವಜನಿಕ ನೋಟೀಸನ್ನು ಈ ಮೂಲಕ ಹೊರಡಿಸುತ್ತಿದ್ದು, ದಿನಾಂಕ: 9.11.2023 ರಂದು ಮಧ್ಯಾಹ್ನ 3.00 ಗಂಟೆಯ ಸಮಯದಂದು ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 2.11.2023 ರಂದು ಹೊರಡಿಸಲ್ಪಟ್ಟಿದೆ.

ಸಹಿ/- ಅಪೀಲುದಾರರ ಪರ ವಕೀಲರು
(ಎಂ.ಎಸ್. ರಾಜಕುಮಾರ್)
ಸ್ಥಳ : ದಾವಣಗೆರೆ.
ದಿನಾಂಕ : 2.11.2023

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-
ಉಪನಿರ್ದೇಶಕರವರು
ಭೂ ದಾಖಲೆಗಳ ಉಪನಿರ್ದೇಶಕರವರ
ನ್ಯಾಯಾಲಯ, ದಾವಣಗೆರೆ,



**ನೀವೂ ಕೂಡಾ ಸಾಫ್ಟ್‌ವೇರ್ ಇಂಜಿನಿಯರ್ ಆಗಬೇಕೇ...?**

ನಿಮಗೆ ಈಗಾಗಲೇ ತಿಳಿದಿರುವಂತೆ ಮಾಹಿತಿ ತಂತ್ರಜ್ಞಾನದ ಕಂಪನಿಗಳಲ್ಲಿ ಯಾವುದೇ ಕೆಲಸಕ್ಕಾಗಿ
**ಕ್ಲೌಡ್ ಕಂಪ್ಯೂಟಿಂಗ್ ಮತ್ತು ಡೆವೊಪ್ಸ್ ಕೌಶಲ್ಯಗಳು ಅಗತ್ಯವಿದೆ. ಆನ್‌ಲೈನ್‌ನಲ್ಲಿ ಅಥವಾ ವೈಯಕ್ತಿಕವಾಗಿ ಅನುಭವಿ, ಅರ್ಹ ಮಾರ್ಗದರ್ಶಕರಿಂದ ದಾವಣಗೆರೆಯಲ್ಲಿ ಕ್ಲೌಡ್, ಡೆವೊಪ್ಸ್ ಮತ್ತು ಇತರೆ ಸಂಬಂಧಿತ ಕೌಶಲ್ಯಗಳನ್ನು ಕಲಿಯಿರಿ.**

**AWS, Linux, Azure, Devops, Cloud, Kubernetes, Docker, Terraform**

ಮತ್ತು ಇಂತಹ ಕೌಶಲ್ಯಗಳನ್ನು ಕಲಿಯುವ ಬಗ್ಗೆ
**ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿ.**

COMPASS ENGINEERING SERVICES
info@compass-engg.com
whatsApp : 6362231434



**ಸಾರ್ವಜನಿಕ ಪ್ರಕಟಣೆಗಾಗಿ**

**ಈ ಕೆಳಕಂಡ ಪ್ರಕಟಣೆದಾರರಾದ ನಾವು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:**

ಈ ಕೆಳಕಂಡ ಷೆಡ್ಯೂಲ್ ಸೊತ್ತಿನ ಪೂರ್ವ ಭಾಗದ ಅಳತೆ 25x13 feet ವುಳ್ಳ ಸೊತ್ತನ್ನು ಈ ಹಿಂದೆ ಒಬ್ಬ ಎ.ಪಿ.ನಾಗರಾಜಪ್ಪ ಬಿನ್ ಅಟ್ಟಿ ಪುಟ್ಟಪ್ಪ ಇವರು ಸಿ.ಎ.ಶಾಂತಕುಮಾರ್ ಬಿನ್ ಚನ್ನವೀರಯ್ಯ ಇವರಿಗೆ ದಿ.17.1.2013 ರಂದು ಮಾರಾಟ ಮಾಡಿದ್ದು, ಸದರಿ ನೋಂದಣಿ ಕ್ರಯ ಪತ್ರ ಸಂಖ್ಯೆ ದಿ.14109. ತದನಂತರ ಸದರಿ ಸೊತ್ತನ್ನು ಸಿ.ಎ.ಶಾಂತಕುಮಾರ್ ಬಿನ್ ಚನ್ನವೀರಯ್ಯ ಇವರು ಸದರಿ ಸೊತ್ತನ್ನು ಎಫ್.ಎಸ್. ಶಿವಪೂಜಿ ಮಠ ಬಿನ್ ಸಿದ್ದರಾಮಯ್ಯ ಶಿವಪೂಜಿ ಮಠ ಮತ್ತು ಎಫ್.ಎಸ್.ಶಶಿಕಲಾ ಕೋಂ ಎಫ್.ಎಸ್.ಶಿವಪೂಜಿ ಮಠ ಇವರುಗಳಿಗೆ ಮಾರಾಟ ಮಾಡಿದ್ದು, ಸದರಿ ನೋಂದಣಿ ಕ್ರಯ ಪತ್ರ ಸಂಖ್ಯೆ ದಿ.16955, ತದನಂತರ ಸದರಿ .ಎಫ್.ಎಸ್.ಶಿವ ಬಿನ್ ಸಿದ್ದರಾಮಯ್ಯ ಶಿವಪೂಜಿ ಮಠ ಇವರು ಪೌತಿಯಾಗಿದ್ದು ಸದರಿಯವರುಗಳಿಗೆ ಮೇಲ್ಕಾಣಿಸಿದ ಸದರಿಯವರ ಹೆಂಡತಿ ಎಫ್.ಎಸ್.ಶಶಿಕಲಾ (ಆಧಾರ್ ನಂಬರ್ 2104 0388 0743) ಮತ್ತು ಮಕ್ಕಳಾದ ಭವಾನಿ ಎಫ್.ಎಸ್.ತೇಜಸ್ವಿನಿ ಮತ್ತು ಅಶ್ವಿನಿ, ಪಕ್ಕೀರಸ್ವಾಮಿ, ಸುರೇಶ್, ಎಲ್ಲರ ಖಾಯಂ ವಾಸ 12ನೇ ಕ್ರಾಸ್, ಎಮ್.ಸಿ.ಸಿ 'ಎ' ಬ್ಲಾಕ್, ದಾವಣಗೆರೆ ಇವರು ಕೆಳಕಂಡ ಷೆಡ್ಯೂಲ್ ಸೊತ್ತಿನ ಪೂರ್ವ ಭಾಗದ ಅಳತೆ 25x13 feet ವುಳ್ಳ ಸೊತ್ತಿಗೆ ಇವರುಗಳು ಮಾತ್ರ ವಾರಸುದಾರರುಗಳಿದ್ದು, ಸದರಿಯವರುಗಳ ಹೆಸರಿಗೆ ಈ ಕೆಳಕಂಡ ಷೆಡ್ಯೂಲ್ ಸೊತ್ತಿನ ಖಾತೆಯು ವರ್ಗಾವಣೆಯಾಗಿದ್ದು, ಈ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರಳಾದ ನಾನು ಮಾರಾಟ ಮಾಡಲು ಇಚ್ಚಿಸಿರುತ್ತೇನೆ.

ಪ್ರಕಟಣೆದಾರಳಾದ ನಾನು ದಿ.2.11.2023 ರಂದು ದಾವಣಗೆರೆಯ ಪಿ.ಜೆ ಬಡಾವಣೆಯಿಂದ ರೈಲ್ವೆ ನಿಲ್ದಾಣದ ಬಳಿ ನಮ್ಮ ಸಂಬಂಧಿಕರ ಜೊತೆ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ ಮೇಲ್ಕಾಣಿಸಿದ ಮೂಲ ಕ್ರಯಪತ್ರಗಳಲ್ಲಿ ಒಂದಾದ ಕ್ರಯ ಪತ್ರ ನಂಬರ್ 14109 ದಿನಾಂಕ : 17.1.2013 ಹಾಗೂ ನನ್ನ ಮನೆಯ ಇತರೆ ರೆವಿನ್ಯೂ ದಾಖಲೆಗಳು ಇರುವ ಕವರ್ ಜೆರಾಕ್ಸ್ ಮಾಡಿಸಲು ಹೈಸ್ಕೂಲ್ ಮೈದಾನದ ಹತ್ತಿರ ನ್ಯಾಯಾಲಯದ ಪಕ್ಕ ಇರುವ ಜೆರಾಕ್ಸ್ ಅಂಗಡಿಗೆ ಹೋಗಿ ಜೆರಾಕ್ಸ್ ಮಾಡಿಸಿಕೊಂಡು ವಾಪಾಸ್ ರೈಲ್ವೆ ನಿಲ್ದಾಣದ ಬಳಿ ಬರುವ ಮಾರ್ಗ ಮಧ್ಯದಲ್ಲಿ ಕೈ ಜಾರಿ ಕೆಳಗೆ ಬಿದ್ದಿತು.

ಸ್ವಲ್ಪ ಮುಂದೆ ಹೋದಾಗ ಆ ಕವರ್ ಬಿದ್ದಿರುವುದು ಗೊತ್ತಾಗಿ ನಾವು ಬಂದ ಮಾರ್ಗದಲ್ಲಿಯೇ ಕೂಡಲೇ ಹಿಂದಿರುಗುವಷ್ಟರಲ್ಲಿ ಸದರಿ ಕವರ್ ಸಿಕ್ಕಿತು, ಆದರೆ ಆ ಕವರ್‌ನಲ್ಲಿದ್ದ ಮೂಲ ಕ್ರಯ ಪತ್ರ ನಂಬರ್ 14109 ದಿನಾಂಕ : 17.1.2013 ಕಳೆದಿರುತ್ತದೆ. ಆದರೆ ಅದರೊಂದಿಗೆ ಇತರೆ ರೆವಿನ್ಯೂ ದಾಖಲೆಗಳು ಹಾಗೆಯೇ ಇದ್ದವು. ಆದ ಕಾರಣ ಸದರಿ ಮೂಲ ಕ್ರಯಪತ್ರ ನಂಬರ್ 14109 ದಿನಾಂಕ : 17.1.2013 ದಾಖಲೆ ಯಾರಿಗಾದರೂ ದೊರೆತಲ್ಲಿ, ಕೂಡಲೇ ಈ ಕೆಳಕಂಡ ಪ್ರಕಟಣೆದಾರರ ವಿಳಾಸಕ್ಕೆ ಸಂಪರ್ಕಿಸಬೇಕೆಂದು, ಸದರಿ ಪ್ರಕಟಣೆದಾರರು ತಮ್ಮ ಮೇಲೆ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿಲ್ಲ ಹಾಗೂ ತಮ್ಮ ಮೇಲೆ ಪ್ರಕಟಣೆದಾರರು ಯಾವುದೇ ರೀತಿಯ ಕಾನೂನಿನ ಕ್ರಮ ಕೈಗೊಳ್ಳುವುದಿಲ್ಲವೆಂದು ತಿಳಿಸಲಾಗಿದೆ.

**ಷೆಡ್ಯೂಲ್**: ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರಿ. ಸರ್ವೆ ನಂ.86/10 ವಿಸ್ತೀರ್ಣ ಎಕರೆ 00, ಗುಂ 20 ವುಳ್ಳ ಜಮೀನು ಈ ಹಿಂದೆ ವಾಸೋಪಯೋಗಕ್ಕಾಗಿ ಚಿತ್ರದುರ್ಗ ಜಿಲ್ಲಾಧಿಕಾರಿಗಳವರಿಂದ ನಂ.ALNSR. 29083 ತಾರೀಕು 23-2-1985 ರ ಆರ್ಡರ್ ಪ್ರಕಾರ ಅಲಿನೇಷನ್ ಆಗಿದ್ದು, ನಂತರ ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೊತ್ತಿನ ಬಗ್ಗೆ ಲೇಔಟ್ ಪ್ಲಾನನ್ನು ತಯಾರು ಮಾಡಿದ್ದು, ಸದರಿ ಪ್ಲಾನನ್ನು ಈ ಹಿಂದೆ ದಿನಾಂಕ.21.8.1985 ರಂದು ದಾವಣಗೆರೆ ನಗರ ಯೋಜನಾ ಪ್ರಾಧಿಕಾರ ಇವರ ಮೀಟಿಂಗ್ ರೆಜುಲ್ಯೂಷನ್ ನಂ.25, ದಿನಾಂಕ 28.2.1985 ರ ಪ್ರಕಾರ ವಸತಿ ವಿನ್ಯಾಸ ಮಂಜೂರಾತಿ ಪಡೆದು, ನಂತರ ಸದರಿ ಪ್ಲಾನ್‌ನಲ್ಲಿ ಕಂಡ ಸೈಟ್‌ಗಳಿಗೆ ಈ ಹಿಂದೆ ಶಾಬನೂರು ಗ್ರಾಮ ಪಂಚಾಯಿತಿಗೆ ಅಭಿವೃದ್ಧಿ ಶುಲ್ಕ ಪಾವತಿ ಮಾಡಿ, ಶಾಬನೂರು ಗ್ರಾಮ ಪಂಚಾಯಿತಿಯಿಂದ ಡೋರ್ ನಂಬರ್ ಹಾಗೂ ಖಾತೆ ಸಹ ದಾಖಲು ಮಾಡಿಸಿದ್ದು, ಹಾಲಿ ದಾವಣಗೆರ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿರುವ ದಾವಣಗೆರೆ ಸಿಟಿ, ಎಸ್.ಎಸ್. ಬಡಾವಣೆ, 'ಎ' ಬ್ಲಾಕ್' ನಲ್ಲಿ ಬರತಕ್ಕ ಸೈಟ್ ನಂ.104 (ಒಂದು ನೂರ ನಾಲ್ಕು), ಇದರ ಡೋರ್ ನಂಬರ್ 1966/104, ಒಟ್ಟು ಅಳತೆ : 349 + 50/2 x 55 ಅಡಿವುಳ್ಳ ಪೂರಾ ಸೈಟಿನ ಪೈಕಿ ಉತ್ತರಾರ್ಧ ಭಾಗದ ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂಬರ್ 1966/104/P, ಇದರ ಅಳತೆ 28 x 50 ಅಡಿವುಳ್ಳ ನಿವೇಶನದ ಪೈಕಿ ಉತ್ತರ ಭಾಗದ ಪೂರ್ವ ಭಾಗದ ಕಡೆಗೆ ಬರತಕ್ಕ ಸೈಟಿನ ಅಳತೆ : 25 x 113 ಅಡಿವುಳ್ಳ ಖಾಲಿ ನಿವೇಶನಕ್ಕೆ **ಚಕ್ಕುಬಂದಿ:** ಪೂರ್ವಕ್ಕೆ - 30 ಅಡಿ ಅಗಲದ ರಸ್ತೆ, ಪಶ್ಚಿಮಕ್ಕೆ- ಇದೇ ಸೈಟ್ ನಂಬರ್ ಪೈಕಿ ಎಸ್.ಟಿ.ಯೋಗೇಶ್ವರ ಇವರಿಗೆ ಕ್ರಯವಾಗಿರುವ ಖಾಲಿ ನಿವೇಶನ. ಉತ್ತರಕ್ಕೆ- 60 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ- ಇದೇ ಸೈಟ್ ನಂಬರ್ ಪೈಕಿ ಸತ್ಯನಾರಾಯಣ ಇವರಿಗೆ ಕ್ರಯವಾಗಿರುವ ಖಾಲಿ ನಿವೇಶನ 30 ಅಡಿ ಅಗಲದ ರಸ್ತೆ,

**ಪ್ರಕಟಣೆದಾರಳು : ಎಫ್.ಎಸ್.ಶಶಿಕಲಾ**
**ಕೋಂ ಲೇಟ್ ಎಫ್.ಎಸ್.ಶಿವಪೂಜಿ ಮಠ**
**(ಆಧಾರ್ ನಂಬರ್ 2104 0388 0743), ವಾಸ : 12ನೇ ಕ್ರಾಸ್,**
**ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ. ಫೋ. : 9964636849**

## ಸಂತ ಪರಂಪರೆಗೊಂದು ಆದರ್ಶ: ಸ್ವಾಮಿ ಸಿದ್ಧೇಶ್ವರರು..!



ಕೊಂಚ ಪ್ರಸಿದ್ದಿ ಸಿಕ್ಕರೂ 'ನಾನೊಬ್ಬ ದೊಡ್ಡ ಜನ' ಎಂದು ಬೀಗುವವರ ಮಧ್ಯೆ ಸ್ವಾಮಿ ಸಿದ್ಧೇಶ್ವರರು ವಿಭಿನ್ನವಾಗಿಯೂ, ಆದರ್ಶಪ್ರಾಯರಾಗಿಯೂ ಕಾಣಿಸುತ್ತಾರೆ. ಅಪರಿಗ್ರಹ ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸಿ, ಪದ್ಮಶ್ರೀ ಸೇರಿದಂತೆ ತಮಗೆ ಬಂದ ಪ್ರಶಸ್ತಿ, ಬಿರುದು, ಸನ್ಮಾನಗಳನ್ನು ನಯವಾಗಿ ನಿರಾಕರಿಸಿದ್ದ ಸ್ವಾಮಿ ಸಿದ್ಧೇಶ್ವರರು ಸಂತ ಪರಂಪರೆಗೆ ಮೇಲ್ಪಂಕ್ತಿ.

ಸ್ವಾಮಿ ಸಿದ್ಧೇಶ್ವರರು ಕರ್ನಾಟಕದ ಉತ್ತರ ಜಿಲ್ಲೆಗಳಲ್ಲಿ ಹೆಚ್ಚು ಪ್ರಸಿದ್ಧರು. ಆದರೆ ಇವರ ಪ್ರಸಿದ್ಧಿ, ಬಯಸಿ ಬಂದದ್ದಲ್ಲ. ಕನಿಷ್ಟ ಒಂದು ಪತ್ರಿಕಾಗೋಷ್ಠಿಯನ್ನೂ ಕರೆದು ಅವರು ಮಾತನಾಡಿಲ್ಲ. ರಾಜಕಾರಣಿಗಳನ್ನು ಭೇಟಿ ಮಾಡಿ ಅನುದಾನ, ಸಹಕಾರಗಳನ್ನು ಕೇಳುವುದಂತೂ ದೂರದ ಮಾತು. ತಮ್ಮ ಭಾಷಣ ಟಿವಿಯಲ್ಲಿ ಬರಬೇಕು, ಪತ್ರಿಕೆಗಳಲ್ಲಿ ಬರಬೇಕೆಂದು ಅವರು ಬಯಸಲಿಲ್ಲ. ರಾಷ್ಟ್ರೀಯ, ಅಂತರರಾಷ್ಟ್ರೀಯ ಸಭೆಗಳಲ್ಲಿ ಭಾಗವಹಿಸಿ, ವಿದ್ವತ್ ಪ್ರದರ್ಶಿಸುವುದಂತೂ ದೂರದ ಮಾತು.ಆದರೂ ಲಕ್ಷಾಂತರ ಜನರ ಹೃದಯವನ್ನು ಗೆದ್ದರು. ತಮ್ಮನ್ನು ಹೊಗಳಬೇಕು, ಪ್ರಶಂಸಿಸಬೇಕು ಎಂದು ಅಪೇಕ್ಷಿಸದ ಸರಳ ಜೀವನದ ಸಂತ, ಪ್ರಾಮಾಣಿಕ ಅಧ್ಯಾತ್ಮ ಜೀವನದ ಮೂಲಕ ಜನರ ಹೃದಯವನ್ನು ಗೆದ್ದವರು.

ಸ್ವಾಮಿ ಸಿದ್ಧೇಶ್ವರರ ಪ್ರವಚನಗಳಿಗೆ ಹೋಗದವರಿಗೆ ಆ ಸಭೆಯು ಹೇಗೆ ನಡೆಯುತ್ತದೆ ಎಂಬುದನ್ನು ಇಲ್ಲಿ ಖಂಡಿತವಾಗಿ ಹೇಳಲೇಬೇಕು, ಸೂರ್ಯೋದಯದೊಂದಿಗೆ ಪ್ರಾರಂಭವಾಗುತ್ತಿದ್ದ ಪ್ರವಚನ ಕಾರ್ಯಕ್ರಮ ಸುಮಾರು ಒಂದು ಗಂಟೆ ಅವಧಿಯದ್ದು. 30 ದಿನಗಳ ಕಾಲ ಒಂದೇ ಸ್ಥಳದಲ್ಲಿ ಪ್ರವಚನ. ಬೆಲ್ಲಕ್ಕೆ ಮುತ್ತುವ ಇರುವೆಗಳಂತೆ ಸಾವಿರಾರು ಜನ ಪ್ರವಚನ ಪ್ರಾರಂಭಕ್ಕೂ ಮುನ್ನ ಸೇರುತ್ತಿದ್ದರು. ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರಿದ್ದರೂ ಎಲ್ಲೂ ಸದ್ದಿಲ್ಲ! ಗಾಢ ಮೌನ. ಮೂಲೆಯಲ್ಲೊಬ್ಬ ಕೆಮ್ಮಿದರೂ ಎಲ್ಲರಿಗೂ ಕೇಳಿಸುವಷ್ಟು ನಿಶ್ಶಬ್ದ ! ಸಭೆ ತುಂಬುತ್ತಿದ್ದಂತೆ ಶ್ವೇತವಸ್ತ್ರ ಧರಿಸಿ ಮೈಕಿನ ಮುಂದೆ ನಿಲ್ಲುತ್ತಿದ್ದ ಸ್ವಾಮಿ ಸಿದ್ಧೇಶ್ವರರು ಪ್ರವಚನ ಪ್ರಾರಂಭಿಸುತ್ತಿದ್ದರು. ಒಂದು ಪದವನ್ನೂ ತಪ್ಪಾಗಿ ಹೇಳದಷ್ಟು ಸ್ಪಷ್ಟ ಚಿಂತನೆ.

ಪ್ರವಚನ ಮುಗಿಯುತ್ತಿದ್ದಂತೆ ವೇದಿಕೆಯಿಂದ ಸ್ವಾಮಿಗಳು ಇಳಿದು ಹೋಗುತ್ತಿದ್ದರು. ಸ್ವಾಮಿಗಳು ಕೆಳಗಿಳಿದ್ದದ್ದೇ ಕಾರ್ಯಕ್ರಮ ಮುಗಿ ಯಿತೆಂಬುದಕ್ಕೆ ಸೂಚನೆ. ಬಂದ ಭಕ್ತರಲ್ಲಿ ಅದೇನು ಶಿಸ್ತು, ಅದೇನು ನಮ್ರತೆ. ಅಂದಹಾಗೆ, ವಿಜಯಪುರದಲ್ಲಿರುವ ಸ್ವಾಮಿ ಸಿದ್ಧೇಶ್ವರರ ಜ್ಞಾನಯೋಗಾಶ್ರಮದ ಮೂಲತತ್ವಗಳೇನು ಗೊತ್ತೇ ?

ಕರ್ಮಯೋಗ, ಭಕ್ತಿಯೋಗ, ಧ್ಯಾನಯೋಗ, ಜ್ಞಾನಯೋಗ..!

ಸಂಗ್ರಹ: **ಜೆ.ಸೋಮನಾಥ್**

## ಮಾಗಾನಹಳ್ಳಿ ಹಾಲಪ್ಪನವರ ಅರ್ಥಪೂರ್ಣ ಬದುಕು ಮಾದರಿ

### ಕುಂಬಳೂರು : ಹಾಲಪ್ಪನವರ ನುಡಿ ನಮನ ಕಾರ್ಯಕ್ರಮದಲ್ಲಿ ಶ್ರೀ ಯೋಗಾನಂದ ಸ್ವಾಮೀಜಿ






ಮಲೇಬೆನ್ನೂರು, ನ.6- ಮಾಗಾನಹಳ್ಳಿ ಹಾಲಪ್ಪನವರು ಬಹಳ ಕಷ್ಟದಿಂದ ಬೆಳೆದು ಮೇಲೆ ಬಂದಿದ್ದು, ಅವರು ಅರ್ಥಪೂರ್ಣ ಬದುಕು ಸಾಗಿಸುವ ಮೂಲಕ ಪಕ್ಷಾತೀತ ಮತ್ತು ಜಾತ್ಯತೀತವಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದು ಯಲವಟ್ಟಿಯ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಸೋಮವಾರ ಕುಂಬಳೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಹರಿಹರ ತಾ.ಪಂ. ಹಾಗೂ ಜಿಲ್ಲಾ ಗಂಗಾಮತಸ್ಥ ಸಮಾಜದ ಮಾಜಿ ಅಧ್ಯಕ್ಷರಾದ ಮಾಗಾನ ಹಳ್ಳಿ ಹಾಲಪ್ಪನವರ ಕೈಲಾಸ ಸಮಾರಾಧನೆ ಹಾಗೂ ನುಡಿ ನಮನ ಕಾರ್ಯತಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಹಾಲಪ್ಪನವರ ಅವಿಭಕ್ತ ಕುಟುಂಬ ಮುಂದೆಯೂ ಹೀಗೆಯೇ ಇರಲಿ ಎಂದು ಸ್ವಾಮೀಜಿ ಶುಭ ಹಾರೈಸಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ಹಮಾಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದ ಹಾಲಪ್ಪಜ್ಜನವರು, ಹಂತ ಹಂತವಾಗಿ ಬೆಳೆದು ಹರಿಹರ ತಾ.ಪಂ. ಅಧ್ಯಕ್ಷರಾಗಿ, ಜಿಲ್ಲಾ ಗಂಗಾಮತಸ್ಥ ಸಮಾಜದ ಅಧ್ಯಕ್ಷರಾಗಿ, ಗ್ರಾ.ಪಂ. ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸುವ ಜೊತೆಗೆ ಕುಟುಂಬವನ್ನು ಬಲಿಷ್ಠವಾಗಿ ಬೆಳೆಸುವ ಮೂಲಕ ನಮಗೆಲ್ಲಾ ಮಾದರಿಯಾಗಿದ್ದಾರೆ ಎಂದರು.

ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಹಾಲಪ್ಪಜ್ಜನವರು, ಕಾಂಗ್ರೆಸ್ ಪಕ್ಷದಲ್ಲಿದ್ದರೂ ಬೇರೆ ಪಕ್ಷದವರ ಜೊತೆಯೂ ಪ್ರೀತಿ-ವಿಶ್ವಾಸದಿಂದ ಇರುತ್ತಿದ್ದರು. ಅವರು ಶತಾಯುಷಿಗಳಾಗಬೇಕಿತ್ತೆಂಬುದು ನಮ್ಮ ಆಶಯವಾಗಿತ್ತು ಎಂದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಹಾಲಪ್ಪಜ್ಜನವರು ನನ್ನನ್ನು ಶಾಸಕನನ್ನಾಗಿ ಮಾಡಲು ಬಹಳ ಹೋರಾಟ ಮಾಡಿದ್ದರು. ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾಗಿ ಪಕ್ಷಕ್ಕೆ ಕೊಡುಗೆ ನೀಡಿದ್ದಾರೆ. ಅವರಂತೆ ಅವರ ಮಕ್ಕಳು ರಾಜಕೀಯವಾಗಿ ಬೆಳೆಯಲಿ ಎಂದರು.

ಜಿಲ್ಲಾ ಗಂಗಾಮತಸ್ಥ ಸಮಾಜ ಅಧ್ಯಕ್ಷ ಮಾಗಾನಹಳ್ಳಿ ಬಿ.ಕೆ.ಮಂಜುನಾಥ್ ಮಾತನಾಡಿ, ಹಾಲಪ್ಪನವರು ನಮ್ಮ ಸಮಾಜದ ಜಿಲ್ಲಾಧ್ಯಕ್ಷರಾಗಿದ್ದಾಗ ಸಂಘಕ್ಕೆ ಸ್ವಂತ ಕಟ್ಟಡ ಕಟ್ಟಲು ಚಾಲನೆ ನೀಡಿದ್ದರು. ಅದನ್ನು ನಾವು ಪೂರ್ಣಗೊಳಿಸಿದ್ದೇವೆ. ಹಾಲಪ್ಪಜ್ಜ ಮಾಗಾನಹಳ್ಳಿಯಿಂದ ಕುಂಬಳೂರಿಗೆ ಬಂದು, ಕಠಿಣ ಪರಿಶ್ರಮದ ಮೂಲಕ ದೊಡ್ಡ ಸಾಮ್ರಾಜ್ಯ ಕಟ್ಟಿ ಹೋಗಿದ್ದಾರೆ. ಆ ಸಾಮ್ರಾಜ್ಯ ಅವರ ಮಕ್ಕಳು ಬೆಳಸಬೇಕೆಂದು ಹೇಳಿದರು.

ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಮಾಜಿ ಸಂಸದ ಚನ್ನಯ್ಯ ಒಡೆಯರ್ ಅವರ ಪುತ್ರ ಶಿವಕುಮಾರ್ ಒಡೆಯರ್, ಕೆಪಿಸಿಸಿ ಮೀನುಗಾರರ ವಿಭಾಗದ ರಾಜ್ಯಾಧ್ಯಕ್ಷ ಮಂಜುನಾಥ್ ಸುಣಗಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಂದಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ವೀರಯ್ಯ, ಉಪನ್ಯಾಸಕ ರಾಜೇಶ್ ನೋಟದ್, ಗ್ರಾಮದ ಆರ್.ಹೆಚ್.ಬಸವರಾಜ್, ಬಿ.ಶಂಭುಲಿಂಗಪ್ಪ ಅವರುಗಳು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ವಿಧಾನಸಭೆಯ ಮಾಜಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ಕೊಳೇನಹಳ್ಳಿ ಸತೀಶ್, ತಾ.ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಕಾಂಗ್ರೆಸ್ ಮುಖಂಡ ಸುರೇಶ್ ಹಾದಿಮನಿ, ತಾ.ಪಂ. ಮಾಜಿ ಅಧ್ಯಕ್ಷರಾದ ಎಸ್.ಜಿ.ಪರಮೇಶ್ವರಪ್ಪ, ಆದಾಪುರ ವೀರಭದ್ರಪ್ಪ, ಭಾನುವಳ್ಳಿ ಕನ್ನಪ್ಪ, ಉದ್ಯಮಿ ವೈ.ವಿರೂಪಾಕ್ಷಪ್ಪ, ಜಿ.ಪಂ. ಮಾಜಿ ಸದಸ್ಯೆ ಗಂಗಮ್ಮ ಮಹಾಂತೇಶ್, ಮಾಜಿ ಪ್ರಧಾನ ನಿಟ್ಟೂರು ಏಕಾಂತಪ್ಪ, ಹಲ್ಮನಿ ನಿಂಗಪ್ಪ, ಕಣ್ಣಾಳ್ ಧರ್ಮಣ್ಣ, ಕೆಂಚನಹಳ್ಳಿ ಮಹಾಂತೇಶ್, ಗುಳದಹಳ್ಳಿ ನಾಗರಾಜ್, ಹಿರಿಯ ವಕೀಲ ಬಿ.ಗಂಗಪ್ಪ, ದಾವಣಗೆರೆ ಗೋಪಾಲಪ್ಪ, ಮಾಗಾನಹಳ್ಳಿ ಪರಮಶುರಾಮ್, ಅಯೂಬ್ ಪೈಲ್ವಾನ್, ರಾಜಭವನ್ ಗಾಂಧಿ, ಜಿಲ್ಲಾ ಕಸಾಪ ಗೌ.ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ತಳಸದ ಬಸವರಾಜ್, ಮಲೇಬೆನ್ನೂರಿನ ಗೌಡ್ರ ಮಂಜಣ್ಣ, ಕಣ್ಣಾಳ್ ಪರಸಪ್ಪ, ಕಣ್ಣಾಳ್ ಹನುಮಂತಪ್ಪ, ಧರ್ಮಣ್ಣ, ಕೆ.ಪಿ.ಗಂಗಾಧರ್, ಎ.ಆರೀಫ್ ಅಲಿ, ಬಂಗಾರದ ಅಂಗಡಿ ರಾಜು, ಕೊಮಾರನಹಳ್ಳಿ ಉಜ್ಜೇಶ್, ಬಿ. ಉಮಾಶಂಕರ್, ಮಲ್ಲನಾಯಕನಹಳ್ಳಿ ಮಾಲತೇಶ್, ಅವಲಕ್ಕಿ ಮಿಲ್ ರಾಜು, ವಾಸನದ ಭೋಜರಾಜ್, ಪಿ.ಆರ್.ರಾಜು, ಭೋವಿಕುಮಾರ್, ಪಿ.ಹೆಚ್.ಶಿವು, ಪಿ.ಆರ್. ಕುಮಾರ್, ಎ.ಕೆ.ಲೋಕೇಶ್, ಜಿಗಳಿ ಇಂದೂಧರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಕೆ.ಕುಬೇರಪ್ಪ ಪ್ರಾರ್ಥಿಸಿದರು. ಎಂ. ವಾಸುದೇವಮೂರ್ತಿ ಸ್ವಾಗತಿಸಿದರು. ಹಿರಿಯ ಪತ್ರಕರ್ತ ಜಿಗಳಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರೆ, ಎಂ.ಹೆಚ್.ಶರಣ್ ವಂದಿಸಿದರು.

## ವಿಶ್ವಕಪ್‌ನಿಂದ ಲಂಕಾ ಹೊರಕ್ಕೆ, ಟೈಮ್ಡ್ ಔಟ್ ಆದ ಮಾಥ್ಯೂಸ್

ನವದೆಹಲಿ, ನ. 6 – ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಶ್ರೀಲಂಕಾ ವಿರುದ್ಧ ಬಾಂಗ್ಲಾದೇಶ ಮೂರು ವಿಕೆಟ್ ಜಯ ಗಳಿಸಿದೆ. ಇದರೊಂದಿಗೆ ಶ್ರೀಲಂಕಾ ವಿಶ್ವಕಪ್ ಆಸೆ ಕಳೆದುಕೊಂಡಿದೆ.

ಶ್ರೀಲಂಕಾ ಮೊದಲು ಬ್ಯಾಟ್ ಮಾಡಿ 49.3 ಓವರ್‌ಗಳಲ್ಲಿ 279 ರನ್ ಗಳಿಸಿತು. ಚರಿತ್ ಅಸಲಂಕ ಅವರು 105 ರನ್ ಗಳಿಸಿದರು. ಆದರೆ, ಬಾಂಗ್ಲಾದೇಶ ಈ ಗುರಿಯನ್ನು ಇನ್ನೂ 53 ಎಸೆತಗಳಿರುವಂತೆಯೇ ತಲುಪಿತು.

ಬಾಂಗ್ಲಾದೇಶದ ನಾಯಕ ಶಕೀಬ್ ಅಲ್ ಹಸನ್ 82 ರನ್ ಗಳಿಸಿದರು ಹಾಗೂ 57 ರನ್ ನೀಡಿ ಎರಡು ವಿಕೆಟ್ ಉರುಳಿಸಿದರು. ನಜ್ಮಲ್ ಹೊಸೇನ್ ಶಾಂತೋ 90 ರನ್ ಗಳಿಸಿದರು. ಉಭಯರು 169 ರನ್ ಜೊತೆಯಾಟದ ಮೂಲಕ ಗೆಲುವಿಗೆ ಅಡಿಪಾಯ ಹಾಕಿದರು.

ಶ್ರೀಲಂಕಾದ ಆಂಜೆಲೊ ಮಾಥ್ಯೂಸ್ ಅವರು ಕ್ರಿಕೆಟ್ ಇತಿಹಾಸದಲ್ಲಿ 'ಟೈಮ್ಡ್ ಔಟ್' ನಿಯಮದ ಅನ್ವಯ ಔಟ್ ಆದ ಮೊದಲ ಆಟಗಾರರಾಗಿದ್ದೂ ಈ ಪಂದ್ಯದ ವಿಶೇಷ. ಮಾಥ್ಯೂಸ್ ಅವರು 25ನೇ ಓವರ್‌ನಲ್ಲಿ ಬ್ಯಾಟಿಂಗ್‌ಗೆ ಬಂದಿದ್ದರು. ಅವರ ಹೆಲ್ಮೆಟ್‌ನ ಪಟ್ಟಿ ಕಿತ್ತುಕೊಂಡಿತ್ತು. ಅದನ್ನು ಸರಿ ಮಾಡುವಲ್ಲಿ ಎರಡು ನಿಮಿಷ ವಿಳಂಬವಾಯಿತು. ಇದಕ್ಕಾಗಿ ಅವರನ್ನು ಔಟ್ ಮಾಡುವಂತೆ ಬಾಂಗ್ಲಾದ ನಾಯಕ ಶಕೀಬ್ ಮಾಡಿದ ಮನವಿಯನ್ನು ಅಂಪೈರ್ ಪುರಸ್ಕರಿಸಿದರು.

## ಪಂಪ್‌ಸೆಟ್‌ಗಳಿಗೆ ನಿತ್ಯ 7 ಗಂಟೆ ವಿದ್ಯುತ್

**(1ನೇ ಪುಟದಿಂದ)** ಹೆಚ್ಚಿನ ಹೊರೆಯಾಗದಂತೆ ಪ್ರತಿದಿನ ಏಳು ತಾಸು ವಿದ್ಯುತ್ ನೀಡಲು ಇಂದಿನ ಸಭೆಯಲ್ಲಿ ನಿರ್ಧರಿಸಲಾಯಿತು. ಅದಕ್ಕಾಗಿ ಸುಮಾರು 1500 ಕೋಟಿ ರೂ. ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಅನುದಾನದ ಉಳಿತಾಯ, ಮರು ಹಂಚಿಕೆಯ ಮೂಲಕ ಈ ವೆಚ್ಚ ಭರಿಸಲಾಗುವುದು ಎಂದು ಹೇಳಿದರು.

## ಲೆದರ್ ಬಾಲ್ ಕ್ರಿಕೆಟ್: ಜಿಲ್ಲಾ ತಂಡ ದ್ವಿತೀಯ



ದಾವಣಗೆರೆ, ನ. 6 - ಶಾಲಾ ಶಿಕ್ಷಣ ಇಲಾಖೆಯಿಂದ ಚಿಕ್ಕೋಡಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ 14 ವರ್ಷ ವಯೋಮಾನದ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ದಾವಣಗೆರೆ ಜಿಲ್ಲಾ ತಂಡವು ಬೆಂಗಳೂರು ವಿಭಾಗ ಮಟ್ಟದಿಂದ ಭಾಗವಹಿಸಿ ದ್ವಿತೀಯ ಬಹುಮಾನ ಪಡೆದಿರುತ್ತದೆ.

ಸೇಂಟ್ ಜಾನ್ಸ್ ಶಾಲೆಯ ಟಿ. ಸುಹಾನ್, ಜೈನ್ ವಿದ್ಯಾಲಯದ ಆರ್. ಶಿವರಾಜ್ ಹಾಗೂ ಸೈಯ್ಯದ್ ಉಮರ್, ವಿಜ್ಞಾನ್ ಇಂಟರ್‌ನ್ಯಾಷನಲ್ ಶಾಲೆಗಳ ಮೂವರು ವಿದ್ಯಾರ್ಥಿಗಳು ಬಿಹಾರ್‌ನಲ್ಲಿ ನಡೆಯುವ ರಾಷ್ಟ್ರಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ ಎಂದು ತರಬೇತುದಾರರಾದ ತಿಮ್ಮೇಶ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ತಿಳಿಸಿದ್ದಾರೆ.

## ಅಪರಾಧ ಕಾಯ್ದೆಗಳ ಬದಲಿಸುವ ವರದಿಗಳಿಗೆ ಒಪ್ಪಿಗೆ ಪ್ರತಿಪಕ್ಷಗಳ ಸದಸ್ಯರಿಂದ ಆಕ್ಷೇಪಗಳು ದಾಖಲು

ನವದೆಹಲಿ, ನ. 6 – ಈಗಿರುವ ಅಪರಾಧ ಕಾಯ್ದೆಗಳನ್ನು ಬದಲಿಸುವ ಮೂರು ವರದಿಗಳಿಗೆ ಸಂಸತ್ತಿನ ಗೃಹ ವ್ಯವಹಾರಗಳ ಸಮಿತಿ ಒಪ್ಪಿಗೆ ನೀಡಿದೆ. ಸಮಿತಿಯಲ್ಲಿರುವ ಪ್ರತಿಪಕ್ಷಗಳ ಸದಸ್ಯರು ಕೆಲ ಭಿನ್ನ ನಿಲುವಿನ ಟಿಪ್ಪಣಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಸದಸ್ಯ ಬ್ರಿಜ್ ಲಾಲ್ ಅವರ ಅಧ್ಯಕ್ಷತೆಯ ಗೃಹ ವ್ಯವಹಾರಗಳ ಸಂಸದೀಯ ಸಮಿತಿಯು ಸೋಮವಾರ ಸಭೆ ನಡೆಸಿತು. ಸಭೆಯಲ್ಲಿ ಪ್ರತಿಪಕ್ಷಗಳ ಕೆಲ ಸದಸ್ಯರು ಭಿನ್ನ ನಿಲುವಿನ ಟಿಪ್ಪಣಿ ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಭಾರತೀಯ ದಂಡ ಸಂಹಿತೆ, ಸಿ.ಆರ್.ಪಿ.ಸಿ. ಹಾಗೂ ಭಾರತೀಯ ಸಾಕ್ಷಿ ಕಾಯ್ದೆಗಳನ್ನು ಬದಲಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇವುಗಳ ಜಾಗದಲ್ಲಿ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮಗಳನ್ನು ಜಾರಿಗೆ ತರಲಾಗುವುದು.

ಮುಂದಿನ ಒಂದೆರಡು ದಿನಗಳಲ್ಲಿ ಪ್ರತಿಪಕ್ಷಗಳ ಇನ್ನೂ ಕೆಲ ಸದಸ್ಯರು ನಿಯಮಗಳ ಅನ್ವಯ ಆಕ್ಷೇಪಗಳನ್ನು ದಾಖಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ಅಕ್ಟೋಬರ್ 27ರಂದು ಸಮಿತಿಯ ಸಭೆ ನಡೆದಿತ್ತು. ಪ್ರತಿಪಕ್ಷಗಳ ಸದಸ್ಯರು ವರದಿ ಅಧ್ಯಯನಕ್ಕೆ ಇನ್ನೂ ಹತ್ತು ದಿನಗಳ ಸಮಯ ಬೇಕು ಎಂದು ಕೇಳಿದ್ದರು. ಹೀಗಾಗಿ ವರದಿಯ ಅಂಗೀಕಾರ ವಿಳಂಬವಾಗಿತ್ತು.

## ಸರ್ಕಾರಿ ಶಾಲೆಗಳಿಗೂ ಸ್ಮಾರ್ಟ್ ಕ್ಲಾಸ್

**(1ನೇ ಪುಟದಿಂದ)** ಉತ್ತಮಗೊಳಿಸಲು ಡಿಜಿಟಲ್ ಸ್ಮಾರ್ಟ್ ಕ್ಲಾಸ್ ಮಾಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರು ಕ್ರಮ ತೆಗೆದುಕೊಳ್ಳಬೇಕು. ಶಾಲೆಗಳಿಗೆ ಕಂಪ್ಯೂಟರ್ ಒದಗಿಸಿ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಿ, ಶಿಕ್ಷಕರು ಆನ್‌ಲೈನ್‌ನಲ್ಲಿಯೇ ಎಲ್ಲಾ ತರಬೇತಿ ಪಡೆದುಕೊಂಡು ಸ್ಮಾರ್ಟ್ ಕ್ಲಾಸ್ ನಡೆಸಲು ಅವಕಾಶ ಇದೆ ಎಂದು ಗುಂಜನ್ ಕೃಷ್ಣ ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿನ ಶುದ್ಧ ಕುಡಿಯುವ ನೀರಿನ ನಿರ್ವಹಣೆಯನ್ನು ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ವಹಿಸಲು ಅವ ಕಾಶ ಇದೆ. ಸಾರ್ವಜನಿಕ ಸಹಭಾಗಿತ್ವದ ಕಾರಣದಿಂದ ದಾವಣಗೆರೆ ಪಾಲಿಕೆಗೆ ಶುದ್ಧ ನೀರಿನ ಘಟಕಗಳ ಹೊರೆ ಇಲ್ಲ. ಇದೇ ಮಾದರಿ ಗ್ರಾಮೀಣ ಘಟಕಗಳಿಗೂ ಅಳವಡಿಸಿ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು. ಜಿಲ್ಲೆಯಲ್ಲಿ 981 ಎಕರೆ ರೇಷ್ಮೆ ವಿಸ್ತರಣಾ ಪ್ರದೇಶವಿದ್ದು ಕಳೆದ ಎರಡು ವರ್ಷಗಳಲ್ಲಿ 115 ಎಕರೆಯನ್ನು ಹೊಸದಾಗಿ ವಿಸ್ತರಣೆ ಮಾಡಲಾಗಿದೆ ಎಂದು ಇಲಾಖೆ ಅಧಿಕಾರಿಗಳು ಸಭೆಗೆ ತಿಳಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಡಿ ಈ ವರ್ಷ 35 ಲಕ್ಷ ವಾರ್ಷಿಕ ಮಾನವ ದಿನಗಳ ಗುರಿಯಲ್ಲಿ 195.40 ಕೋಟಿ ಕಾರ್ಮಿಕ ಆಯವ್ಯಯ ಗುರಿಯನ್ನು ಹೊಂದಲಾಗಿದೆ. ಅಕ್ಟೋಬರ್ ಅಂತ್ಯದವರೆಗೆ 24.05 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ಒಟ್ಟು ಜಿಲ್ಲೆಯಲ್ಲಿ 2,30,568 ಜಾಬ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದು ಉಪಕಾರ್ಯದರ್ಶಿ ಕೃಷ್ಣನಾಯ್ಕ್ ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### ತಾಯಿ, ಮಗು ಮರಣದ ಆಡಿಟ್

ಹೆರಿಗೆ ಸಂದರ್ಭದಲ್ಲಿ ಮರಣ ಹೊಂದುವ ತಾಯಿ ಮತ್ತು ಶಿಶು ಮರಣಗಳನ್ನು ತಗ್ಗಿಸಬೇಕಾಗಿದೆ. ಈ ನಿಟ್ಟಿನಲ್ಲಿ ಯಾವುದೇ ಮರಣ ಪ್ರಕರಣ ಸಂಭವಿಸಿದರೂ ಇದಕ್ಕೆ ಕಾರಣಗಳೇನು ಎಂದು ಆಡಿಟ್ ನಡೆಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ ತಿಳಿಸಿದರು.

2023 ರ ಸೆಪ್ಟೆಂಬರ್‌ವರೆಗೆ ಜನನದ ವೇಳೆ 12 ತಾಯಿ ಹಾಗೂ 215 ಶಿಶುಗಳ ಮರಣವಾಗಿದೆ. ಈ ಪ್ರಮಾಣ ಗಣನೀಯವಾಗಿ ಇಳಿಕೆಯಾಗಬೇಕು. ಈ ನಿಟ್ಟಿನಲ್ಲಿ ಪ್ರತಿ ಮರಣ ಪ್ರಕರಣವನ್ನು ಕೂಲಂಕುಶವಾಗಿ ಪರಿಶೀಲಿಸಿ ಆಡಿಟ್ ನಡೆಸಬೇಕು ಎಂದು ಕಾರ್ಯದರ್ಶಿ ತಿಳಿಸಿದರು.

## ಪ್ರತಿಮಾ ಹತ್ಯೆ : ವಾಹನ ಚಾಲಕನ ಬಂಧನ

**(1ನೇ ಪುಟದಿಂದ)** ನಿವಾಸಿ ಕಿರಣ್, ಪ್ರತಿಮಾ ಬಳಿ ಕಾರು ಚಾಲಕನಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ. ಈತನನ್ನು ಹಲವು ದಿನಗಳ ಹಿಂದೆ ಕೆಲಸದಿಂದ ತೆಗೆಯಲಾಗಿತ್ತು. ವಾಪಸ್ ಕೆಲಸಕ್ಕೆ ತೆಗೆದುಕೊಳ್ಳುವಂತೆ ಪ್ರತಿಮಾ ಅವರಿಗೆ ಒತ್ತಾಯಿಸಿದ್ದ. ಆದರೆ, ಪ್ರತಿಮಾ ಕೆಲಸಕ್ಕೆ ತೆಗೆದುಕೊಂಡಿರಲಿಲ್ಲ. ಅದೇ ಕಾರಣಕ್ಕೆ ಕೋಪಗೊಂಡು ಆರೋಪಿ ಕೃತ್ಯ ಎಸಗಿದ್ದನೆಂದು ಪೊಲೀಸರು ಹೇಳಿದ್ದಾರೆ.

ಕೊಲೆ ನಂತರ ಮುಡಿ ಕೊಡಲು ಮಲೆ ಮಹದೇಶ್ವರ ಬೆಟ್ಟಕ್ಕೆ ಸ್ನೇಹಿತರ ಜೊತೆ ಹೋಗಿದ್ದ. ಭಾನುವಾರ ಮಧ್ಯಾಹ್ನವೇ ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದ ಪೊಲೀಸರು, ಕಿರಣ್‌ನನ್ನು ಬಂಧಿಸಿದ್ದಾರೆ.

## ಅಸ್ತಮಾ ಕಾಯಿಲೆಗೆ ಔಷಧಿ ವಿತರಣೆ

ಚಿಕ್ಕಮಗಳೂರು, ನ. 6- ನಗರದ ಶರ್ಮಾ ಆಯುರ್ವೇದಿಕ್ ಭಂಡಾರ್ ವತಿಯಿಂದ ಅಸ್ತಮಾ ಕಾಯಿಲೆಗೆ ಔಷಧಿ ವಿತರಿಸಲಾಗುವುದು. ಶ್ರೀ ಗಾಯತ್ರಿ ದೇವಿ ಕಲ್ಯಾಣ ಮಂಟಪದಲ್ಲಿ ಇದೇ ದಿನಾಂಕ 26ರ ಭಾನುವಾರ ಕಾರ್ತಿಕ ಪೂರ್ಣಿಮದಲ್ಲಿ ಔಷಧಿ ಕೊಡಲಾಗುವುದು. ಇದೇ ದಿನಾಂಕ 22ರೊಳಗೆ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ:9844016766.


**ಆಯಾ ಬೇಕಾಗಿದ್ದಾರೆ**
ಆಸ್ಪತ್ರೆಗೆ ಆಯಾ ಕೆಲಸಕ್ಕೆ ಬೇಕಾಗಿದ್ದಾರೆ.
ನೇರ ಸಂದರ್ಶನಕ್ಕೆ ಕರೆ ಮಾಡಿ
8618642929

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60 East, 40x60 40x60 South ಅಕ್ಕ-ಪಕ್ಕ, 30x40 East, 30x50 West, 60 ಅಡಿ ರೋಡಿಗಿದೆ, 35 ಲಕ್ಷ ಅಕೌಂಟ್ ಮನಿ ತೆಗೆದುಕೊಳ್ಳುತ್ತಾರೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 30x40, 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, ವಿನಾಯಕ ಬಡಾವಣೆಯಲ್ಲಿ 40x50 South, 50x45 South, 15x45 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
70x62 Corner, 30x45 Corner, 30x62 Corner, 40x40 South, 30x52 North, 30x55 South, 30x50 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ನಗರದ ತುಂಗಭದ್ರಾ ಬಡಾವಣೆಯ ಜಡ್ಜ್ ಕ್ವಾಟ್ರಸ್‌ನಲ್ಲಿ ಬೋರ್ ನೀರಿನ ಸೌಕರ್ಯ ಇರುವ ಡಬಲ್ ಬೆಡ್ ರೂಂನ ಸುಸಜ್ಜಿತ ಮನೆ ಬಾಡಿಗೆಗೆ ಇದೆ.
ಡಾ. ನಿರಂಜನರಾವ್
94488 35203

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ತಕ್ಷಣ ಬೇಕಾಗಿದ್ದಾರೆ**
ಕ್ರಿಸ್ಟಲ್ ಮಲ್ಟಿ ವೆಂಚರ್ಸ್ ಸೇಲ್ಸ್ ಅಥವಾ ಮಾರ್ಕೆಟಿಂಗ್‌ನಲ್ಲಿ ಕೆಲಸ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ, ಮಾರ್ಕೆಟಿಂಗ್‌ನಲ್ಲಿ ಅನುಭವವುಳ್ಳವರಿಗೆ ಮೊದಲ ಆದ್ಯತೆ, ಆಕರ್ಷಕ ವೇತನ 20000 ರಿಂದ 25000, ವಿದ್ಯಾರ್ಹತೆ : 10ನೇ ತರಗತಿ ಮೇಲ್ಪಟ್ಟವರಿಗೆ, ಸ್ಥಳ- RTO ಆಫೀಸ್ ಹತ್ತಿರ ಕೊಂಡಜ್ಜಿ ರೋಡ್, ದಾವಣಗೆರೆ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99644 83353, 96066 78871

**ಅಂಗಡಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ**
ಹುಡುಗರು ಮತ್ತು ಹುಡುಗಿಯರು.
9448229430

**ಜನರೇಟರ್ ಬೇಕಾಗಿದೆ**
ಕಿರ್ಲೋಸ್ಕರ್ ಕಂಪನಿಯ ಹಳೆಯ 30 Kv ಜನರೇಟರ್ ಖರೀದಿಗೆ ಬೇಕಾಗಿದೆ.
ತಕ್ಷಣ ಸಂಪರ್ಕಿಸಿ : ಅಜೇಯ್
98804 96118

**ಕೆಲಸಕ್ಕೆ ಬೇಕಾಗಿದ್ದಾರೆ WANTED**
ಬೆಂಗಳೂರು, ಮೈಸೂರು, ಹಾಗೂ ಕರ್ನಾಟಕದಾದ್ಯಂತ MNC ಕಂಪನಿಗಳಲ್ಲಿ, ಹಾಗೂ ಆಫೀಸ್, ಬ್ಯಾಂಕಿಂಗ್ ಹಾಗೂ ಇನ್ನಿತರೆ PVT LTD ಸಂಸ್ಥೆಗಳಲ್ಲಿ ಕೆಲಸ ಮಾಡಲು ಯುವಕ/ ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ಇದ್ದರೂ/ ಇಲ್ಲದಿದ್ದರೂ ಕೆಲಸ ಲಭ್ಯವಿದೆ. ಸಂಬಳ, 15,000 ರಿಂದ 46,000 ರವರೆಗೆ ಉಳಿದುಕೊಳ್ಳಲು ಉಚಿತ ರೂಂ / ಊಟ ಸೌಲಭ್ಯವಿದೆ.
78993 56424

**ಹುಡುಗರು ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ.
M/S ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43H, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052
ಸಮಯ : ಮಧ್ಯಾಹ್ನ 1 ರಿಂದ 5ರವರೆಗೆ

**ಹಾಲ್ ಬಾಡಿಗೆಗಿವೆ**
ಮುಖ್ಯ ರಸ್ತೆಗೆ 21.1/2 x 10.1/2, 25x15 ಅಂಗಡಿ ಮಳಿಗೆಗಳು ಹಾಗೂ ಮೊದಲನೇ ಮಹಡಿ 1800 sq ಹಾಲ್ ಬಾಡಿಗೆಗೆ ಇವೆ. ಸಪ್ತಗಿರಿ ಶಾಲೆ ಹತ್ತಿರದ ಬಸವೇಶ್ವರ ಸರ್ಕಲ್, ದಾವಣಗೆರೆ.
97401 30548

**ತಕ್ಷಣ ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು
ಟೈಲರಿಂಗ್‌ಗೆ ಮಹಿಳೆಯರು
ಸಹಾಯಕರು-ಹುಡುಗರು
ಹುಡುಗಿಯರು ತಕ್ಷಣ ಬೇಕಾಗಿದ್ದಾರೆ.
ಊಟ, ವಸತಿ ಸೌಲಭ್ಯವಿರುತ್ತದೆ.
88164 38237

**ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸಕ್ಕೆ ಅನಭವ ಇದ್ದವರು ಹಾಗೂ ಅನುಭವ ಇಲ್ಲದವರೂ ಸಹ ಬೇಕಾಗಿದ್ದಾರೆ. ವಿದ್ಯಾಭ್ಯಾಸ ಕನಿಷ್ಠ SSLC ವರೆಗೆ ಓದಿರುವ, ಚುರುಕಾದ ಹುಡುಗರು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ತಿಂಗಳಿಗೆ ಸಂಬಳ 8 ರಿಂದ 10 ಸಾವಿರಗಳು.
ಕೆಲಸದ ಸಮಯ : ರಾತ್ರಿ 9 ರವರೆಗೆ.
ವಿಳಾಸ : ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
94483 39499

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ & ರೆಸ್ಟೋರೆಂಟ್, ಹರಿಹರ
* ರೆಸ್ಟೋರೆಂಟ್ ಮ್ಯಾನೇಜರ್
* ಕುಕ್ಸ್
* ಬಿಲ್ಲಿಂಗ್ ಕಂಪ್ಯೂಟರ್ಸ್
* ಸಪ್ಲೈಯರ್ಸ್ ಕ್ಯಾಪ್ಟನ್ಸ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ.
99726 98591
94490 37488

**WANTED**
S.V. Marketing Davangere
Marketing Executive
Above than 3 years experience. No age bar.
94480 46571, 78993 37571

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ, ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
98447 57474

**ಬೇಕಾಗಿದ್ದಾರೆ**
ಮನ್ವಿತ ಎಂಟರ್‌ಪ್ರೈಸಸ್
ದಾವಣಗೆರೆ ಪಿ.ಬಿ. ರಸ್ತೆ
* ಅಂಗಡಿಯಲ್ಲಿ ಕೆಲಸ ಮಾಡುವವರು
* ಮಾರ್ಕೆಟಿಂಗ್ ಕಲೆಕ್ಷನ್
* ಆಟೋ ಡ್ರೈವರ್ ಬೇಕಾಗಿದ್ದಾರೆ.
9448046571, 7899337571

**SBI Life ನಲ್ಲಿ ಸುವರ್ಣಾವಕಾಶ**
ಮನೆ/ಆಫೀಸ್ ಕೆಲಸದ ಸಮಯದಿಂದಲೇ ಕೆಲಸ ಮಾಡಿ 2 ರಿಂದ 3 ಗಂಟೆ ಕೆಲಸ ಮಾಡಿ ಆಕರ್ಷಕ, ಅನಿಯಮಿತ ಆದಾಯವನ್ನು ಗಳಿಸಿ. ಟ್ರೈನಿಂಗ್ ಕೊಡಲಾಗುವುದು.
ಮೊದಲ ಆದ್ಯತೆ : CA/Tax Auditors/Retired/ VRS/House Wife's/Pigmy Agents/RMP Doctors, RTO Agents
Age -Above 30, ಆದಾಯ 10,000 ರಿಂದ 30,000
87626 24248

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ ಆಗಿರಬೇಕು.
ಕಾವೇರಿ ಮೆಡಿಹೌಸ್ ಪ್ರೈ.ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 2.

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಪಕ್ಕ, (30x55) ಉತ್ತರ ಕಾರ್ನರ್ ಮನೆ ಬಾಡಿಗೆಗೆ ಇದೆ. ಸಾಯಿಬಾಬಾ ದೇವಸ್ಥಾನ ಹಿಂಭಾಗ ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ. ಪೂರ್ವ ದಿಕ್ಕು, 3 BHK (ರೂ. 7,500)
ಸಸ್ಯಹಾರಿಗಳಿಗೆ ಮಾತ್ರ
70196 18397

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿಯವರೆಗೆ ಅಂತರ್ಜಲ ಸಂಶೋಧನೆ (Ground Water) ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ :
ಎಂ.ಟಿ. ಬಸವರಾಜು ಎಂ.ಎಸ್ಸಿ., ಭೂ ವಿಜ್ಞಾನಿಗಳು
94492 02888
86608 03388

**START OWN BUSINESS**
ಗೃಹಿಣಿಯರು, ಪುರುಷರು, ವಿದ್ಯಾರ್ಥಿಗಳು, ಉದ್ಯೋಗಿಗಳು, ನಿರುದ್ಯೋಗಿಗಳು, ವ್ಯಾಪಾರಸ್ಥರು ಹಾಗೂ 18 ವರ್ಷ ಮೇಲ್ಪಟ್ಟ ಎಲ್ಲರೂ ಮನೆಯಿಂದಲೇ ಆದಾಯ ಗಳಿಸಿರಿ ಕೆಲಸ ಒಂದು ಬಾರಿ, ಗಳಿಸಿ ಹಲವು ಬಾರಿ
84969 57469
96209 83691

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಶಂಕರ ಲೀಲಾ ಫ್ಯುಯಲ್ ಸ್ಟೇಷನ್
ಜೈನ್ ಟೆಂಪಲ್ ಪಕ್ಕ, ಆವರಗೆರೆ
90190 94446

**REQUIRED**
Marketing Executive
Kalpatru Plywoods #6, 1st main, Road, S. Nijalingappa Layout, Near Lakshmi floor mills, Davanagere.
94498 11142, 94483 41142

**WANTED**
B.A., B.Ed.,-1 (Eng)
B.Sc.,/B.A.,-1 (pre-Primary)
S.R.P. CONVENT
17th Cross, Anajaneya Badavane, Davangere - 04.
77950 66883, 78927 27892

**ಮಳಿಗೆ ಬಾಡಿಗೆಗಿದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**ತಕ್ಷಣ ಬೇಕಾಗಿದ್ದಾರೆ**
ಅನು ಏಜೆನ್ಸಿ
ಟೆಲಿಕಾಲರ್ಸ್ - 50
ಸ್ಯಾಲರಿ - 15,000 /-
97424 48252, 74835 71646

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**JOB OPPORTUNITY**
Female Office Assistant
Good In Office Work-Computer Skills
Good In Customer Dealings
Freshers can also apply
(B.Com., & M.Com. & MBA)
for contact : 97312 18567
Send C.V-hardsoftdvg@gmail.com

**SECURITY GUARD**
ಬೇಕಾಗಿದ್ದಾರೆ
ಉತ್ತಮ ವೇತನ
70012 87756, 97409 77785

**SHARP WANTED**
Sales and Service Executive (Diploma / ITI)
Office Boy 1 No. (SSLC)
Gaurav Communications, Davanagere.
94487 28866

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FREE STOCK MARKET DEMO CLASS**
8th November 2023
@ 5:00 PM
Hi-tech Hospital Road, Jayanagara, Davanagere 577004.
Limited Seats Available
Register Now. Contact :
80737 59374



ಮಳೆ ಬಂತು ಮಳೆ...

ಮುಂಗಾರು ಮುಗಿಯಿತು. ಬಿತ್ತಿದ್ದ ಬೆಳೆಯೆಲ್ಲಾ ಒಣಗಿತು. ಎಲ್ಲರ ಮುಖದಲ್ಲೂ ಬರದ ಆತಂಕದ ಛಾಯೆ. ಇದರ ಜೊತೆ ಬಿಸಿಲಿನ ಝಳಕ್ಕೆ ಪರಿತಪಿಸುತ್ತಿದ್ದ ಜನರಿಗೆ ಸೋಮವಾರ ಮುಂಜಾನೆ ಸುರಿದ ಮಳೆ ಒಂದಿಷ್ಟು ತಂಪು ನೀಡಿತು.

## ವೇಟ್ ಲಿಫ್ಟಿಂಗ್ : ಪಾಲಿಕೆ ಸದಸ್ಯ ಕೆ.ಎಂ. ವೀರೇಶ್‌ಗೆ ಬಂಗಾರದ ಪದಕ



ದಾವಣಗೆರೆ, ನ. 6 - ಧಾರವಾಡದಲ್ಲಿ ಇತ್ತೀಚೆಗೆ ಮಾಸ್ಟರ್ ಗೇಮ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ವತಿಯಿಂದ 'ಕರ್ನಾಟಕ ಓಪನ್ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್-2023' ಸ್ಪರ್ಧೆಯಲ್ಲಿ ವೇಟ್ ಲಿಫ್ಟಿಂಗ್ ವಿಭಾಗದಲ್ಲಿ ಮಹಾನಗರ ಪಾಲಿಕೆ 33ನೇ ವಾರ್ಡ್ ಸದಸ್ಯ ಕೆ.ಎಂ. ವೀರೇಶ್ ಕುಮಾರ್ ನ್ಯಾಷನಲ್ ಗೋಲ್ಡ್ ಮೆಡಲ್ ಪಡೆದಿದ್ದಾರೆ.

# ಎದೆ ಬಗೆದು ತೋರಿಸಬೇಕಾ, ನಾನು ಬಿಜೆಪಿಯಲ್ಲೇ ಇದ್ದೇನೆ

ಹೊನ್ನಾಳಿ, ನ.11- ನಾನು ಬಿಜೆಪಿಯಲ್ಲಿದ್ದೇನೆ ಎಂಬುದನ್ನು ಹನುಮಂತನ ರೀತಿ ಎದೆ ಬಗೆದು ತೋರಿಸಬೇಕಾ ? ನಾನು ಬಿಜೆಪಿಯಲ್ಲೇ ಇದ್ದೇನೆ. ಕಾಂಗ್ರೆಸ್‌ಗೆ ಹೋಗಿಲ್ಲ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನ ಮಂಡಲದ ಅಧ್ಯಕ್ಷರ ನೇತೃತ್ವದಲ್ಲಿ ಹೆಚ್.ಕಡದಕಟ್ಟೆ, ಅರಬಗಟ್ಟೆ, ಸೊರಟೂರು, ಮಾದನಬಾವಿ ಗ್ರಾಮಗಳಲ್ಲಿ ಮೂರನೇ ದಿನದ ಬರ ಅಧ್ಯಯನ ಪ್ರವಾಸ ಮಾಡಿ, ರೈತರಿಂದ ಮಾಹಿತಿ ಪಡೆದು ಅವರು ಮಾತನಾಡಿದರು.

ರಾಜ್ಯ ಸರ್ಕಾರ 223 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದು, ಪರಿಹಾರ ಮಾತ್ರ ಬಿಡುಗಡೆ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದ ರೇಣುಕಾಚಾರ್ಯ, ಒಂದು ಎಕರೆಗೆ 25 ಸಾವಿರ ರೂ.ಯಂತೆ ಪರಿಹಾರ ನೀಡಬೇಕು. ಇಲ್ಲದೇ ಇದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡ ಬೇಕಾಗುತ್ತದೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕಳೆದ ಮೂರು ದಿನಗಳಿಂದ ಅವಳಿ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ತೆರಳಿ ಬರ ಅಧ್ಯಯನ ನಡೆಸಿ, ರೈತರ ಸಮಸ್ಯೆಗಳನ್ನು ಆಲಿಸುತ್ತಿದ್ದು, ಈ ಬಗ್ಗೆ ವರದಿ ಸಿದ್ದ ಪಡಿಸಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯದ ಮುಖ್ಯಮಂತ್ರಿಗಳಿಗೆ ನೀಡಿ, ಅವಳಿ ತಾಲ್ಲೂಕುಗಳಿಗೆ ಆದಷ್ಟು ಬೇಗ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡುವುದಾಗಿ ತಿಳಿಸಿದರು.

2019 ರಲ್ಲಿ ನನಗೆ 15 ಜಿಲ್ಲೆಗಳ ಬರ ಅಧ್ಯಯನಕ್ಕೆ ಕೊಟ್ಟಿದ್ದು, ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿದ್ದೇನೆ. ಆದರೆ, ಇದೀಗ ನನ್ನನ್ನು ಬರ ಪ್ರವಾಸದ ಪಟ್ಟಿಯಿಂದ ಹೊರಗಿಟ್ಟಿದ್ದು, ನನ್ನ ಕಣ್ಣು, ಕೈ ಕಾಲುಗಳು ಬಿದ್ದೋಗಿದ್ದಾವೆಯೇ ? ಎಂದು ಪ್ರಶ್ನೆ ಮಾಡಿದರು. ನನ್ನನ್ನು ಹೊರಗಿಟ್ಟಿದ್ದು ಅದರಿಂದ ನನಗೇನು ನಷ್ಟವಿಲ್ಲ, ಇದರಿಂದ ಬಿಜೆಪಿ ಪಕ್ಷ, ನಮ್ಮವರೇ ಪಟ್ಟಿಯಿಂದ ನನ್ನನ್ನು ಹೊರ ಇಟ್ಟಿದ್ದು ನಾನು ಇದಕ್ಕೆ ಬಗ್ಗೊಲ್ಲ ಜಗ್ಗೊಲ್ಲ ಕುಗ್ಗೊಲ್ಲ ಎಂದರು.

ಬರಪಟ್ಟಿ ಸಿದ್ದಪಡಿಸಿದವರು ದಾರ ಸಜ್ಜಿಯಂತೆ ಕೆಲಸ ಮಾಡಬೇಕು. ಆದರೆ, ಕತ್ತರಿಯಾಗಿ ಕೆಲಸ ಮಾಡ ಬಾರದು ಎಂದು ಆಕ್ರೋಶ ವ್ಯಕ್ತ ಪಡಿಸಿದ ರೇಣುಕಾಚಾರ್ಯ, ನಾನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರುಗಳನ್ನು ಭೇಟಿ ಮಾಡಿದ್ದು, ಹೊನ್ನಾಳಿ - ನ್ಯಾಮತಿ ಬರ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಲು ಕೇಳಿದರೆ, ನಮ್ಮವರೇ ಶೇ. 90 ರಷ್ಟು ಕಾಂಗ್ರೆಸ್‌ಗೆ ಹೋಗಿದ್ದಾರೆಂದು ಅಪಪ್ರಚಾರ ಮಾಡುತ್ತಿದ್ದಾರೆ. ಮೊನ್ನೆ ಅವರು



ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ

ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದೀರಲ್ಲಾ, ನೀವು ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿದ್ದೀರಾ ? ಎಂದು ಪ್ರಶ್ನೆ ಮಾಡಿದರಲ್ಲದೇ, ಯಾವ ಕಾರಣಕ್ಕೆ ಪಟ್ಟಿಯಿಂದ ಹೊರ ಗಿಟ್ಟಿದ್ದಾರೆಂದು ಬಹಿರಂಗ ಪಡಿಸಬೇಕೆಂದರು.

ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸ್ಪೀಕರ್ ಆಗಿದ್ದವರು ಅವರು ನನಗೆ ಆತ್ಮೀಯರು, ಅವರ ಬಗ್ಗೆ ನನಗೆ ಗೌರವವಿದೆ. ನನ್ನನ್ನು ಪಟ್ಟಿಯಿಂದ ಹೊರಗಿಟ್ಟಿದ್ದು, ನಾನು ಹಾರ ತುರಾಯಿ ಇಟ್ಟುಕೊಂಡು ಅವರಿಗೆ ಕಾಯ ಬೇಕಾ, ಹೊನ್ನಾಳಿಗೆ ಬರುತ್ತೇವೆ ತಾವು ಇರಬೇಕೆಂದು ಹಾಲಿ ಶಾಸಕರು, ಜಿಲ್ಲಾ ಕಾರ್ಯದರ್ಶಿ ಕರೆ ಮಾಡಿದ್ದರು, ನನ್ನನ್ನು ಪಟ್ಟಿಯಿಂದ ಬಿಟ್ಟಿದ್ದು ನಾನು ಹಮಾಲಿ ಮಾಡಲು ಇರಬೇಕಾ ಎಂದರು.

ನಾನು ಜನರ ಧ್ವನಿಯಾಗಿ ವಾಸ್ತವಾಂಶ ಮಾತನಾಡಿದ್ದೇನೆ. ನಾನು ಬಿಜೆಪಿ ವಿರುದ್ದ ಮಾತನಾಡಿಲ್ಲ. ಯಡಿಯೂರಪ್ಪ ಸಿಎಂ ಆಗಿ ಒಳ್ಳೆಯ ಆಡಳಿತ ನೀಡಿದ್ದರು. ಅವರನ್ನು ಇಳಿಸಿದ ಮೇಲೆ ಸಾಕಷ್ಟು ನಷ್ಟವಾಗಿದೆ. ಹಿರಿಯರು ಸಾಕಷ್ಟು, ಜನರು ಪಕ್ಷ ಬಿಟ್ಟು ಹೋದರು, ಬೊಮ್ಮಾಯಿ ಅವರು ಸಿಎಂ ಆಗಿದ್ದರೂ ಸಹ ಅವರನ್ನು ಸ್ವಾತಂತ್ರ್ಯವಾಗಿ ಆಡಳಿತ ಮಾಡಲು ಬಿಡಲಿಲ್ಲ. ಯಡಿಯೂರಪ್ಪನವರನ್ನು ಇಳಿಸಿದ್ದು ತಪ್ಪು ಎಂದು ಘಂಟಾಘೋಷವಾಗಿ ಹೇಳಿದ್ದಕ್ಕೆ ಪಟ್ಟಿಯಿಂದ ಹೊರಗೆ ಇಟ್ಟಿದ್ದಾರೆ ಎಂದರು.

ಚುನಾವಣೆ ಪೂರ್ವದಲ್ಲಿ ಬಿಜೆಪಿಗೆ 100 ಸ್ಥಾನ ಬರ ಬಾರದೆಂದು ಬಿಜೆಪಿ - ಜೆಡಿಎಸ್ ಪ್ಲಾನ್ ಮಾಡಿದ್ದು, ಬಿಜೆಪಿ - ಜೆಡಿಎಸ್ ಹೊಂದಾಣಿಕೆಯಲ್ಲಿ ಸಿಎಂ ಆಗಬೇಕೆಂದು ಕೆಲವರು ಹಗಲುಗನಸು ಕಾಣುತ್ತಿದ್ದರು. ಹಾಗಾಗೀ ಈಶ್ವರಪ್ಪ, ಜಗದೀಶ್ ಶೆಟ್ಟರ್ ಅವರನ್ನು ಮುಗಿಸಿದರೆಂದು ಆಕ್ರೋಶ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ಜಿಲ್ಲಾ ಉಪಾಧ್ಯಕ್ಷ ನೆಲಹೊನ್ನೆ ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ಅರಕೆರೆ ನಾಗರಾಜ್, ಜಿ.ಪಂ.ಮಾಜಿ ಉಪಾಧ್ಯಕ್ಷ ಸುರೇಂದ್ರನಾಯ್ಕ, ತಾ.ಪಂ. ಮಾಜಿ ಸದಸ್ಯರ ಹನುಮಂತಪ್ಪ, ಬಗರ್‌ಹುಕುಂ ಕಮಿಟಿ ಮಾಜಿ ಅಧ್ಯಕ್ಷ ನಾಗರಾಜ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ರಮೇಶ್, ಎಪಿಎಂಸಿ ಸದಸ್ಯರ ಬೀರಪ್ಪ, ದಿಡಗೂರು ಪಾಲಾಕ್ಷಪ್ಪ, ಪಾಲಾಕ್ಷಪ್ಪ, ಪುರಸಭೆ ಮಾಜಿ ಅಧ್ಯಕ್ಷ ರಂಗನಾಥ್, ಸೇರಿದಂತೆ ಮುಖಂಡರುಗಳು, ಕಾರ್ಯಕರ್ತರು, ರೈತರಿದ್ದರು.

## ನಗರದಲ್ಲಿ ಇಂದು-ನಾಳೆ ನಾಟಕೋತ್ಸವ



ನೀವು-ನಾವು ಸಾಂಸ್ಕೃತಿಕ ವೇದಿಕೆ, ಅನ್ವೇಷಕರು ಆರ್ಟ್ಸ್ ಫೌಂಡೇಶನ್ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ದಿನಾಂಕ 7 ಮತ್ತು ನಾಳೆ 8 ರಂದು ನಾಟಕೋತ್ಸವ ಹಾಗೂ ವಿಚಾರ ಸಂಕಿರಣ ಮತ್ತು ಸನ್ಮಾನ ಸಮಾರಂಭವನ್ನು ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಸಂಜೆ 6 ಗಂಟೆಗೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ನಡೆಯುವುದು. ಅಧ್ಯಕ್ಷತೆಯನ್ನು ಡಾ. ಎಂ.ಜಿ. ಈಶ್ವರಪ್ಪ ವಹಿಸುವರು. ಕಾರ್ಯಕ್ರಮವನ್ನು ಪಿ.ಎನ್. ಲೋಕೇಶ್ ಉದ್ಘಾಟಿಸುವರು. ಪರಮೇಶ್ವರ ರಾವ್ ಎಂ. ಕೆ., ಪ್ರಾಸ್ತಾವಿಕ ನುಡಿಗಳನ್ನಾಡುವರು.

ಮುಖ್ಯ ಅತಿಥಿಗಳಾಗಿ ಡಾ. ರವಿಕುಮಾರ್ ಟಿ.ಜಿ., ದಿನೇಶ್ ಕೆ. ಶೆಟ್ಟಿ, ಬಿ.ಎನ್. ಮಲ್ಲೇಶ್, ನಾಗೇಂದ್ರ ಬಂಡೀಕರ್ ಆಗಮಿಸುವರು. ಕಾರ್ಯಕ್ರಮದಲ್ಲಿ ಕು. ರವಿರಾಜ್ ಜಿ. ಹುಲಗೂರು ಇವರನ್ನು ಸನ್ಮಾನಿಸಲಾಗುವುದು.

ನಂತರ ಸಂಜೆ 7 ಗಂಟೆಗೆ ನೊಬೆಲ್ ಪ್ರಶಸ್ತಿ ವಿಜೇತ 'ದಾರಿಯೋ ಫೋ'ನ ದಿ ವರ್ಚುವಲ್ ಬರ್ಗ್ಲರ್ 'ಸಂಸಾರದಲ್ಲಿ ಸನಿದಪ' ನಾಟಕ ಪ್ರದರ್ಶನಗೊಳ್ಳುವುದು.

ನಾಳೆ ಬುಧವಾರ ಬೆಳಿಗ್ಗೆ 'ವೀರ ಯೋಧರರೊಂದಿಗೆ' ವಿಚಾರ ಸಂಕಿರಣದಲ್ಲಿ ಎಸ್.ಟಿ. ವೀರೇಶ್, ಬಾ.ಮ. ಬಸವರಾಜಯ್ಯ ಅವರೊಂದಿಗೆ ಸಂವಾದ ನಡೆಯುವುದು. ಸಂವಾದದಲ್ಲಿ ಕೆ.ಎಂ. ಸುರೇಶ್, ಸಂಪನ್ ಮುತಾಲಿಕ್, ಮಂಜಾನಾಯ್ಕ ಕೆ.ಆರ್. ಶ್ರೀಮತಿ ಶುಭ ಐನಳ್ಳಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬೆಳಿಗ್ಗೆ 10 ಕ್ಕೆ 'ಹುತಾತ್ಮರು' ವಿಷಯ ಕುರಿತು ಸಂವಾದ ನಡೆಯುವುದು. ಅಂದು ಮಧ್ಯಾಹ್ನ ನಡೆಯುವ 'ವೀರ ಯೋಧರೊಂದಿಗೆ' ಸಂವಾದದಲ್ಲಿ ವಾಸುದೇವ್ ರಾಯ್ಕರ್, ಕೊಂಡಜ್ಜಿ ಜಯಪ್ರಕಾಶ್ ಅವರೊಂದಿಗೆ ವಿಚಾರ ಸಂಕಿರಣ ನಡೆಯುವುದು. ಸಂವಾದದಲ್ಲಿ ವಿನಯ್‌ಕುಮಾರ್ ಜಿ.ಬಿ., ಪ್ರಕಾಶ್ ಪಿ.ಬಿ., ಮಾರ್ಕಂಡಯ್ಯ, ಎನ್.ಆರ್. ಪ್ರಸನ್ನ ಕುಮಾರ್ ಕೆ. ಉಮೇಶ್ವರ್ ಶರಣಾರ್ಥಿ ಭಾಗವಹಿಸುವರು.

ಮಧ್ಯಾಹ್ನ 12 ಗಂಟೆಗೆ 'ಹುತಾತ್ಮರು' ವಿಷಯ ಕುರಿತು ಸಂವಾದ ನಡೆಯುವುದು.

ಸಂಜೆ 6 ಗಂಟೆಗೆ ನಡೆಯುವ 'ವೀರ ಯೋಧರ ರೊಂದಿಗೆ' ಸಂವಾದದಲ್ಲಿ ಎನ್.ಟಿ. ಮಂಜುನಾಥ್ ಅವರೊಂದಿಗೆ ಸಂವಾದ ನಡೆಯುವುದು. ಸತ್ಯಪ್ರಕಾಶ್ ಎಂ.ಎನ್., ಡಾ. ಹೆಚ್. ವಿಶ್ವನಾಥ್, ಟಾರ್ಗೆಟ್ ಮಹಮ್ಮದ್ ಅಸ್ಲಂ, ರವಿಚಂದ್ರ, ಎಂ.ಟಿ. ಸುಭಾಷ್‌ಚಂದ್ರ, ಶಿವಕುಮಾರ್ ಟಿ. ಭಾಗವಹಿಸುವರು.

7 ಗಂಟೆಗೆ ಹುತಾತ್ಮರು ಕುರಿತು ಏಕ ವ್ಯಕ್ತಿ ಪ್ರಹಸನ ನಡೆಯುವುದು.

## ನಗರದಲ್ಲಿ ಇಂದು ತಾಲ್ಲೂಕು ಕಸಾಪದಿಂದ ದತ್ತಿ ಉಪನ್ಯಾಸ

'ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ' ಕಾರ್ಯಕ್ರಮದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವು ಮಾಂಟೆಸೊರಿ ಶಾಲಾ ಆವರಣದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ಮಾಂಟೆ ಸೊರಿ ಕಾನ್ವೆಂಟ್ ನರ್ಸರಿ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಹಿರಿಯ ನಾಗರಿಕರ ಸಹಾಯವಾಣಿ ಇವರುಗಳ ಸಹಯೋಗದಲ್ಲಿ ಉಪನ್ಯಾಸ ಕಾರ್ಯಕ್ರಮ ನಡೆಯುವುದು.

ಅಧ್ಯಕ್ಷತೆಯನ್ನು ಶ್ರೀಮತಿ ಮಲ್ಲಮ್ಮ ವಹಿಸುವರು. 'ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆ' ವಿಷಯ ಕುರಿತು ವೀರಭದ್ರಪ್ಪ ತೆಲಗಿ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ವೀಣಾ ಕೃಷ್ಣಮೂರ್ತಿ, ಅಮಿತ್ ಎಂ.ಎನ್. ಆಗಮಿಸುವರು. ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಅಮೃತಾಪುರ ಶ್ರೀನಿವಾಸರಾವ್ ದತ್ತಿಯನ್ನು ದಾನಿಗಳಾದ ಶ್ರೀಮತಿ ಭಾಗ್ಯಲಕ್ಷ್ಮಿ ಸುಬ್ರಹ್ಮಣ್ಯ ಅಮೃತಾಪುರ (ದಾವಣಗೆರೆ) ಇವರಿಂದ ನಡೆಯುವುದು. ಶ್ರೀಮತಿ ಮಲ್ಲಮ್ಮ ಕೋಂ ಉಜ್ಜಪ್ಪ ಮರಿಕೆಂಚಣ್ಣನವರ ದತ್ತಿಯನ್ನು ದತ್ತಿ ದಾನಿಗಳಾದ ಶ್ರೀಮತಿ ಯಶೋಧ ಕೋಂ. ಎಂ. ಮಹೇಶ್ವರ ದೊಡ್ಡೇರಳ್ಳಿ (ದಾವಣಗೆರೆ) ಇವರಿಂದ ನಡೆಯುವುದು.

ಕಬ್ಬೂರು ಶ್ರೀಮತಿ ಕಲ್ಲಮ್ಮ ಮಂಡ್ಲೂರು ತಿಮ್ಮಪ್ಪ ದತ್ತಿಯನ್ನು ದತ್ತಿ ದಾನಿಗಳಾದ ಎಂ.ಟಿ. ಜಯದೇವಪ್ಪ (ದಾವಣಗೆರೆ) ಇವರಿಂದ ನಡೆಯುವುದು.

## ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ನ.6- ನಗರದ ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಘಕ್ಕೆ ಸಾಮಾನ್ಯ ಸದಸ್ಯತ್ವ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಬಿ.ಎಚ್. ವೀರಭದ್ರಪ್ಪ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸಕ್ತರು ಅರ್ಜಿಯನ್ನು ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘ, ಪಿ.ಜೆ. ಬಡಾವಣೆ, ದಾವಣಗೆರೆ ಇವರ ಹೆಸರಿನಲ್ಲಿ ಅರ್ಜಿ ಶುಲ್ಕ 500ರೂ. ಸಲ್ಲಿಸಿ, ರಸೀದಿ ಪಡೆಯಬೇಕು ಎಂದರು.

**ಆಯುಕ್ತರ ಅಸಹಕಾರ:** ಸಂಘದ ಕಟ್ಟಡಕ್ಕೆ ಮಹಾತ್ಮ ಗಾಂಧಿಯವರು ಸ್ವತಃ ಶಿಲಾನ್ಯಾಸ ಮಾಡಿದ್ದು, ಇದನ್ನು ಸ್ಮಾರಕವಾಗಿ ಎಲ್ಲರೂ ಪರಿಗಣಿಸುತ್ತಾ ಬಂದಿದ್ದಾರೆ. ಈ ಕಾರಣಕ್ಕಾಗಿಯೇ ನಗರಸಭೆ ಇದ್ದಾಗಿನಿಂದಲೂ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಪಾಲಿಕೆಯಿಂದ ಅನುದಾನ ನೀಡುತ್ತ ಬರಲಾಗಿದೆ. ಈ ಹಿಂದೆ ವಿದ್ಯಾರ್ಥಿನಿಲಯದ ಭೋಜನ ಶಾಲೆಯ ದುರಸ್ತಿಗಾಗಿ 50ಲಕ್ಷ ರೂ.ಗಳ ಕ್ರಿಯಾ ಯೋಜನೆ ತಯಾರಿಸಿ ಪಾಲಿಕೆಗೆ ಸಲ್ಲಿಸಲಾಗಿತ್ತು. ಆಗಿನ ಆಯುಕ್ತರು ಅದಕ್ಕೆ ಒಪ್ಪಿಗೆಯನ್ನೂ ಸೂಚಿಸಿದ್ದರು. ಆದರೆ, ಈಗಿನ ಆಯುಕ್ತರು ಅದು ಖಾಸಗಿ ಶಾಲೆಯಾಗುತ್ತದೆ ಎಂದು ಹೇಳಿ ಅನುದಾನಕ್ಕೆ ಸಹಕಾರ ನೀಡುತ್ತಿಲ್ಲ ಎಂದು ವೀರಭದ್ರಪ್ಪ ಆರೋಪಿಸಿದರು.

ಸಂಘದ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ, ಪದಾಧಿಕಾರಿಗಳು ಹಾಗೂ ಸದಸ್ಯರಾದ ಬಿ.ಎಂ. ರಾಮಸ್ವಾಮಿ, ಚಂದ್ರಣ್ಣ, ನಾಗರಾಜ್, ಮಂಜಪ್ಪ ಹಲಗೇರಿ, ಬಿ.ಎಂ. ಈಶ್ವರ, ಡಿ. ಮಲ್ಲೇಶ್, ಡಿ. ಗಂಗಾಧರ್, ಎಲ್.ಎಚ್. ಸಾಗರ್, ಬಿ.ಎಲ್. ಪರಶುರಾಮ್ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಚೌಲ್ಟ್ರಿ ಕಳ್ಳತನ ಆರೋಪಿ ಬಂಧನ 32 ಗ್ರಾಂ. ಬಂಗಾರದ ಆಭರಣ ವಶ

ದಾವಣಗೆರೆ, ನ.6- ಶಾಮನೂರು ರಸ್ತೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮದುವೆ ಕಾರ್ಯಕ್ರಮಕ್ಕೆ ಆಗಮಿಸಿದ್ದವರ ಬ್ಯಾಗ್ ಕಳ್ಳತನ ಮಾಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ದಾವಣಗೆರೆಯ ಮಸಾಲೆ ವ್ಯಾಪಾರಿ ಕಿರಣ್ ನಾಯ್ಕ ಆರ್ (26) ಬಂಧಿತ ಆರೋಪಿ. ಈತನಿಂದ 1.80 ಲಕ್ಷ ರೂ. ಬೆಲೆಯ 32 ಗ್ರಾಂ ಬಂಗಾರದ ಆಭರಣ ವಶ ಪಡಿಸಿಕೊಳ್ಳಲಾಗಿದೆ. ಆರೋಪಿತನ ಮೇಲೆ ದಾವಣಗೆರೆ ನಗರದ ವಿದ್ಯಾನಗರ, ಗಾಂಧಿನಗರ, ಬಸವನಗರ ಹಾಗೂ ಬಡಾವಣೆ ಪೊಲೀಸ್ ಠಾಣೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಅಲ್ಲದೇ ಪೊಲೀಸರು ಹಲವು ಬಾರಿ ಆರೋಪಿತನನ್ನು ದಸ್ತಗಿರಿ ಮಾಡಿದ್ದು, ವಾರೆಂಟ್ ಸಹ ಜಾರಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಕಾಡೇನಹಳ್ಳಿ ಗ್ರಾಮದ ಶಿರಿಷ್ ಎನ್. ಎಂಬುವವರು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಕಳ್ಳತನವಾಗಿರುವ ಬಗ್ಗೆ ದೂರು ದಾಖಲಿಸಿದ್ದರು. ಆರೋಪಿ ಪತ್ತೆ ಕಾರ್ಯದಲ್ಲಿ ವಿದ್ಯಾನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀಮತಿ ಪ್ರಭಾವತಿ.ಸಿ.ಶೇತಸನದಿ, ಪಿಎಸ್‌ಐ ವಿಜಯ್ ಎಂ., ರೇಣುಕಾ ಜಿ.ಎಂ, ಸಿಬ್ಬಂದಿಗಳಾದ ಆನಂದ ಮುಂದಲಮನಿ, ಯೋಗೀಶ್ ನಾಯ್ಕ, ಭೋಜಪ್ಪ ಕಿಚಡಿ, ಮಂಜಪ್ಪ.ಟಿ, ಗೋಪಿನಾಥ ಬಿ. ನಾಯ್ಕ, ಲಕ್ಷ್ಮಣ್ ಆರ್. ಶ್ರಮಿಸಿದ್ದಾರೆ.

## ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ



ಹೊಸ ರಸ್ತೆ ಕಾಮಗಾರಿಗೆ 4 ಸಾವಿರ ಕೋಟಿ ರೂ. ಪ್ರಸ್ತಾವನೆ

ಬೆಂಗಳೂರು, ನ. 6 - ಹೊಸ ರಸ್ತೆ ಕಾಮಗಾರಿ ಕೈಗೊಳ್ಳಲು 4,000 ಕೋಟಿ ರೂ.ವರೆಗೂ ಪ್ರಸ್ತಾವನೆ ಕಳಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಪ್ರಸ್ತಾವಕ್ಕೆ ಅನುಮೋದನೆ ಸಿಕ್ಕಿದರೆ ಹೊಸದಾಗಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುವುದು. ನಮ್ಮ ಅವಧಿಯಲ್ಲಿ ಯಾವುದೇ ಕಾಮಗಾರಿ ಬಿಲ್ ಬಾಕಿ ಇಲ್ಲ, ಇರುವುದೆಲ್ಲವೂ ಹಿಂದಿನ ಬಿಜೆಪಿ ಸರ್ಕಾರದ ಅವಧಿಗೆ ಸೇರಿದ್ದು ಎಂದರು.

ನಾಲ್ಕು ಸಾವಿರ ಕೋಟಿ ರೂ.ನಷ್ಟು ಹೆಚ್ಚುವರಿ ಬಾಕಿ ಸೇರಿದಂತೆ ಒಟ್ಟು 6,000 ಕೋಟಿ ರೂ.ನಷ್ಟು ಬಿಲ್ ಬಾಕಿ ಇದೆ ಎಂದರು.

ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಅವರು, ಸತೀಶ್ ಜಾರಕಿಹೊಳಿ ಮುಖ್ಯ ಮಂತ್ರಿ ಆಗಲಿದ್ದಾರೆ ಎಂದು ಸಮುದಾಯದ ಪರವಾಗಿ ಹೇಳಿಕೆ ನೀಡಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ, 2028ಕ್ಕೆ ಮುಖ್ಯಮಂತ್ರಿ ಸ್ಥಾನ ಕೊಡಿ ಎಂದು ಕೋರಲಾಗುವುದು. ಇದೇ ರೀತಿ ಬೇರೆಯವರು ಕೇಳುವುದು, ಬಿಡುವುದು ಅವರವರ ಇಷ್ಟ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಎಂದು ಹೇಳಿರುವಾಗ ಬೇರೆಯವರು ಹೇಳುವ ಅಗತ್ಯ ಇಲ್ಲ. ಈ ವಿಚಾರದಲ್ಲಿ ಪಕ್ಷದ ತೀರ್ಮಾನವೇ ನನ್ನ ತೀರ್ಮಾನವಾಗಿದ್ದು, ಇಂತಹ ಸಂದರ್ಭದಲ್ಲಿ ಅಭಿಪ್ರಾಯ ಹೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ಪ್ರಧಾನಿ ಮೋದಿ ಅವರು ರಾಜಕೀಯ ಭಾಷಣ ಮಾಡುತ್ತಾರೆ, ನಮ್ಮಲ್ಲಿ ವಾಕ್ ಸ್ವಾತಂತ್ರ್ಯವಿದೆ, ಆದರೆ ಆ ಪಕ್ಷದಲ್ಲಿ ಸ್ವಾತಂತ್ರ್ಯವಿಲ್ಲ ಎಂದು ಹೇಳಿದರು.

## 'ಸೋಮೇಶ್ವರ ಗಾನ ಸಿರಿ' ಪ್ರಶಸ್ತಿಗಾಗಿ ಗೀತ ಗಾಯನ ಸ್ಪರ್ಧೆ

ದಾವಣಗೆರೆ,ನ. 6- ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಇದೇ ದಿನಾಂಕ 11ರ ಶನಿವಾರ ಬೆಳಿಗ್ಗೆ 9.30 ಕ್ಕೆ ಜಿಲ್ಲಾ ಮಟ್ಟದ, ಅಂತರ ಶಾಲಾ ಮಟ್ಟದ ಗೀತ ಗಾಯನ ಸ್ಪರ್ಧೆ ಏರ್ಪಡಿಸಲಾಗಿದ್ದು, ಆಸಕ್ತ ಶಾಲಾ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನವಾಗಿ 'ಸೋಮೇಶ್ವರ ಗಾನ ಸಿರಿ' ಪ್ರಶಸ್ತಿ ಹಾಗೂ 5 ಸಾವಿರ ರೂಪಾಯಿ ನೀಡಲಾಗುವುದು, ದ್ವಿತೀಯ ಬಹುಮಾನ ಪ್ರಶಸ್ತಿ ಪತ್ರದೊಂದಿಗೆ 3 ಸಾವಿರ ರೂ. ನೀಡಿ ಗೌರವಿಸಲಾಗುವುದೆಂದು ಶಾಲೆಯ ಗೌರವ ಕಾರ್ಯದರ್ಶಿ ಕೆ.ಎಂ ಸುರೇಶ್ ತಿಳಿಸಿದ್ದಾರೆ.

## ಮಹಿಳಾ ಉದ್ಯಮಾಕಾಂಕ್ಷಿಗಳಿಗೆ ತರಬೇತಿ ಶಿಬಿರ

ದಾವಣಗೆರೆ, ನ. 6- ನಗರದ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಮಹಿಳಾ ಸಂಘದಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಜಿಲ್ಲೆಯ ಆಸಕ್ತ ಮಹಿಳಾ ಉದ್ಯಮಾಕಾಂಕ್ಷಿಗಳಿಗೆ ಇದೇ ದಿನಾಂಕ 15 ರಿಂದ 24 ರವರೆಗೆ ಉದ್ಯಮ ಶೀಲತಾಭಿವೃದ್ಧಿ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ (ಬೆಂಗಳೂರು) ಇವರ ಪ್ರಾಯೋಜಕತ್ವದಲ್ಲಿ ಸಿಡಾಕ್ (ಕರ್ನಾಟಕ ಉದ್ಯಮ ಶೀಲತಾಭಿವೃದ್ಧಿ ಕೇಂದ್ರ, ಧಾರವಾಡ) ಸಂಸ್ಥೆಯಿಂದ ಈ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ.

ವಿವರಕ್ಕೆ ಜಂಟಿ ನಿರ್ದೇಶಕರ ಕಛೇರಿ, ಸಿಡಾಕ್, ಪ್ಲಾಟ್ ನಂ: 76ಎ-(ಪಿ1), ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ. ತರಬೇತಿದಾರರಾದ ವಿನಯ ಜಿ.ಕೆ. ಮೊ.ಸಂ: 98861 15200 ಹಾಗೂ ಬಸವರಾಜ ಜಿ. ಬಿ. ಮೊ.ಸಂ: 91647 42033 ಸಂಪರ್ಕಿಸಲು ಸಿಡಾಕ್‌ನ ಜಿಲ್ಲಾ ಜಂಟಿ ನಿರ್ದೇಶಕರು ಆರ್.ಪಿ. ಪಾಟೀಲ್ ತಿಳಿಸಿದ್ದಾರೆ.

# ಕಾಂಗ್ರೆಸ್ ಬರ ನಿರ್ವಹಣೆಯ ವೈಫಲ್ಯತೆಯಿಂದ ರೈತರು ಕಂಗಾಲು

## ಹೊನ್ನಾಳಿಯಲ್ಲಿ ಬರ ಅಧ್ಯಯನ ತಂಡದೊಂದಿಗೆ ವಿಧಾನಸಭಾ ಮಾಜಿ ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ

ಹೊನ್ನಾಳಿ-ನ್ಯಾಮತಿ, ನ.6- ರಾಜ್ಯದ 220 ತಾಲ್ಲೂಕುಗಳಲ್ಲಿ ಭೀಕರ ಬರಗಾಲದಿಂದ ರೈತ ಸಮುದಾಯ ತತ್ತರಿಸಿ ಹೋಗಿದ್ದು, ಕಾಂಗ್ರೆಸ್ ರೈತರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡದೇ ಅಧಿಕಾರದ ಹಗ್ಗಜಗ್ಗಾಟದಲ್ಲಿ ಮುಳುಗಿ ಹೋಗಿದೆ ಎಂದು ವಿಧಾನಸಭಾ ಮಾಜಿ ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳ ರೈತರ ಜಮೀನುಗಳಿಗೆ ಬರ ಅಧ್ಯಯನ ತಂಡದೊಂದಿಗೆ ಭೇಟಿ ನೀಡಿ ಹಾನಿಯಾದ ಮೆಕ್ಕೆಜೋಳದ ಬೆಳೆಯನ್ನು ವೀಕ್ಷಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಹಿಂದೆಂದೂ ಕಾಣದ ಬರಗಾಲದ ಭೀಕರತೆಗೆ ರೈತ ಸಮುದಾಯ ನಲುಗಿ ಹೋಗಿದೆ. ಸಕಾಲದಲ್ಲಿ ಮಳೆಯಾಗದೇ ರೈತರು ಬೆಳೆದ ಫಸಲು ಒಣಗಿ ಹೋಗಿದೆ, ಮಳೆಯಾಗದೇ ಯಾವ ಬೆಳೆಯೂ ಕೈಸೇರದೇ ರೈತರು ತೀವ್ರ ಆತಂಕದಲ್ಲಿದ್ದು, ಬೆಳೆ ಹಾನಿಯಿಂದ ಸಾಲದ ಶೂಲಕ್ಕೆ ಹೆದರಿ ಆತ್ಮಹತ್ಯೆಯ ಹಾದಿ ತುಳಿಯುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ರೈತ ಸಮುದಾಯದ ಸಂಕಷ್ಟಕ್ಕೆ ನೆರವಾಗದ ಹಿನ್ನೆಲೆಯಲ್ಲಿ ಬಿಜೆಪಿ ಪಕ್ಷದ ವತಿಯಿಂದ 17 ತಂಡಗಳನ್ನು ರಚಿಸಿ, ರಾಜ್ಯದೆಲ್ಲೆಡೆ ಸಂಚರಿಸಿ ಬರ ಅಧ್ಯಯನ ನಡೆಸಿ ಕಾಂಗ್ರೆಸ್ ಸರ್ಕಾರದ ಮೇಲೆ ಒತ್ತಡ ಹೇರಿ ರೈತರಿಗೆ ಪರಿಹಾರ ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು.

ಬಿಜೆಪಿ ಪಕ್ಷವು ತಂಡಗಳನ್ನು ರಚಿಸಿ, ಬರ ಅಧ್ಯಯನ ಮಾಡಲು ಮುಂದಾಗುತ್ತಿದ್ದಂತೆಯೇ ಎಚ್ಚೆತ್ತ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲಾ



ಉಸ್ತುವಾರಿ ಸಚಿವರಿಗೆ 1 ವಾರದೊಳಗೆ ಬರ ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ ಎಂದು ವ್ಯಂಗ್ಯವಾಡಿದರು.

ರಾಜ್ಯ ಸರ್ಕಾರದಿಂದ ಕಾವೇರಿ ವಿಚಾರದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳದೇ ಇಂತಹ ವಿಷಮ ಪರಿಸ್ಥಿತಿಯಲ್ಲೂ ಕಾವೇರಿ ನೀರು ತಮಿಳುನಾಡಿಗೆ ಹರಿಯುವಂತಾಗಿದೆ. ರಾಜ್ಯದಲ್ಲಿ ಕುಡಿಯುವ ನೀರಿಗೆ ತತ್ವಾರ, ಕಾನೂನು ಶಾಂತಿ ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಸರ್ಮಪಕ ವಿದ್ಯುತ್ ವಿತರಣೆಯಾಗುತ್ತಿಲ್ಲ. ಜಾನುವಾರುಗಳಿಗೆ ಮೇವಿಲ್ಲದೇ ಹಾಲಿನ ಡೈರಿಗಳಲ್ಲಿ ಹಾಲಿನ ಪ್ರಮಾಣ ಕಡಿಮೆಯಾಗಿದೆ. ಕಾರ್ಮಿಕರು ಗುಳೆ ಹೋಗುವುದನ್ನು ತಪ್ಪಿಸಬೇಕು ಎಂದು ಒತ್ತಾಯಿಸಿದರು.

**ರೇಣುಕಾಚಾರ್ಯ ವಿವಾದಗಳಿಂದ ನಾಯಕ:** ಬರ ಅಧ್ಯಯನ ತಂಡದಿಂದ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಹೆಸರನ್ನು ಕೈ ಬಿಟ್ಟಿದ್ಯಾಕೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ರೇಣುಕಾಚಾರ್ಯ ಅವರು ಪಕ್ಷದ ಚೌಕಟ್ಟಿನಲ್ಲಿರದೇ ವಿವಾದಗಳನ್ನು ಸೃಷ್ಟಿಸಿ ನಾಯಕನಾಗಲು ಹೊರಟಿರುವ ಅವರು ತಮ್ಮನ್ನು ಪಕ್ಷದವರು ಕರೆಯುವ ಹಾಗೆ ವ್ಯಕ್ತಿತ್ವವನ್ನು ಮೊದಲು ಬೆಳಿಸಿಕೊಳ್ಳುವುದನ್ನು ಕಲಿಯಬೇಕು ಎಂದು ಮಾರ್ಮಿಕವಾಗಿ ನುಡಿದರು.

**ರೈತನ ಅಳಲು:** ಮಾದನಭಾವಿಯ ರೈತ ಓಂಕಾರಪ್ಪ ಅವರು ಸಂಸದ ಜಿ.ಎಂ.ಸಿದ್ದೇಶ್ ಮತ್ತು ಬರ ಅಧ್ಯಯನ ತಂಡದವರಲ್ಲಿ ಸ್ವಾಮಿ ನಾವು ಬೆಳೆದ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದ್ದು ಜೀವನ ಮಾಡುವುದೇ ಕಷ್ಟ ಸಾಧ್ಯವಾಗಿದ್ದು ನೀವುಗಳು ಮನಸ್ಸು ಮಾಡಿದರೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ನಮ್ಮ ಹಾನಿಯಾದ ಬೆಳೆಗೆ ಸಮರ್ಪಕ ಪರಿಹಾರ ಕೊಡಿಸಲು ಸಾಧ್ಯವೆಂದು ಪರಿಪರಿಯಾಗಿ ಬೇಡಿಕೊಂಡ ದೃಶ್ಯ ಮನ ಕಲಕುವಂತಿತ್ತು.

**ದಾನಿಹಳ್ಳಿ ಮೃತ ರೈತನ ಕುಟುಂಬಕ್ಕೆ ಸಾಂತ್ವಾನ :** ಇತ್ತೀಚಿಗೆ ಆತ್ಮಹತ್ಯೆ ಮಾಡಿಕೊಂಡಿದ್ದ ಮೃತ ನಾಗರಾಜ್ ಕುಟುಂಬಕ್ಕೆ ಬರ ಅಧ್ಯಯನ ತಂಡವು ಭೇಟಿ ನೀಡಿ ಸಾಂತ್ವಾನ ಹೇಳಿತು. ಈ ಸಂದರ್ಭದಲ್ಲಿ ಮೃತ ರೈತನ ಮರಣ ಪ್ರಮಾಣ ಪತ್ರದಲ್ಲಿ ಲೋಪ-ದೋಷವಾಗಿದ್ದನ್ನು ಶಿವಮೊಗ್ಗದ ಜಿಲ್ಲಾ ಆರೋಗ್ಯಾಧಿಕಾರಿಗೆ ಸಂಸದ ಜಿ.ಎಂ.ಸಿದ್ದೇಶ್ವರ ಅವರು ದೂರವಾಣಿ ಮುಖಾಂತರ ಸಂಪರ್ಕಿಸಿ ದಾಖಲೆಗಳನ್ನು ಸರಿಮಾಡಿಕೊಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರಪ್ಪ, ಪ್ರೊ.ಲಿಂಗಣ್ಣ, ಮಾಜಿ ಮುಖ್ಯ ಸಚೇತಕ ಶಿವಯೋಗಿಸ್ವಾಮಿ, ದುಂಡಪ್ಪ, ವೀರೇಶ್ ಹನಗವಾಡಿ, ತಾಲ್ಲೂಕು ಉಸ್ತುವಾರಿ ಶಾಂತರಾಜ್ ಪಾಟೀಲ್, ಅಸಂಘಟಿತ ಪ್ರಕೋಷ್ಠದ ರಾಜ್ಯ ಸಂಚಾಲಕ ಎ.ಬಿ.ಹನುಮಂತಪ್ಪ, ಮೆಸ್ಕಾಂ ಮಾಜಿ ನಿರ್ದೇಶಕ ಎಸ್.ರುದ್ರೇಶ್, ಮುಖಂಡರಾದ ಸಿ.ಕೆ.ರವಿಕುಮಾರ್, ಎಂ.ಆರ್.ಮಹೇಶ್, ಎ.ಜಿ.ಮಹೇಂದ್ರಗೌಡ, ಎಂ.ಯು.ನಟರಾಜ್, ಯಕ್ಕನಹಳ್ಳಿ ಜಗದೀಶ್, ನೆಲಹೊನ್ನೆ ದೇವರಾಜ್, ಅಜಯ್‌ರೆಡ್ಡಿ, ಕೆ.ವಿ.ಚನ್ನಪ್ಪ, ಕಡೂರಪ್ಪ, ರೈತ ಮುಖಂಡರಾದ ಬೆಳಗುತ್ತಿ ಉಮೇಶ್, ಕೆ.ಸಿ.ಬಸಪ್ಪ, ಪ್ರವೀಣ್, ಶಾಂತರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಜಿಲ್ಲಾ ಅಭಿವೃದ್ಧಿಯಲ್ಲಿ ಸಚಿವ ಮಲ್ಲಿಕಾರ್ಜುನ್ ಪಾತ್ರವೇನು?



ದಾವಣಗೆರೆ, ನ.6- ಜಿಲ್ಲೆಗೆ ಸಂಸದ ಜಿ.ಎಂ. ಸಿದ್ದೇಶ್ವರ ಏನು ಕೊಡುಗೆ ನೀಡಿದ್ದಾರೆ ? ಎಂದು ಪದೇ ಪದೇ ಕೇಳುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು, ಮೊದಲು ತಾವು ಜಿಲ್ಲೆಗೆ ಏನು ಕೊಡುಗೆ ನೀಡಿದ್ದಾರೆ ಎಂದು ಉತ್ತರಿಸಲಿ ಎಂದು ಬಿಜೆಪಿ ಮುಖಂಡ ಕೊಂಡಜ್ಜಿ ಜಯಪ್ರಕಾಶ್ ಹೇಳಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಸಂಸದ ಸಿದ್ದೇಶ್ವರ ಅವರ ಬಗ್ಗೆ ಸಚಿವರು ಬಾಲಿಶತನದ ಹಾಗೂ ಅಸಂವಿಧಾನಿಕ ಪದ ಬಳಸುತ್ತಿರುವುದು ಖಂಡನೀಯ. ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು, ಜನ ಸಾಮಾನ್ಯರಿಗೂ ನೋವುಂಟು ಮಾಡದಂತಹ ಪದಗಳನ್ನು ಬಳಕೆ ಮಾಡಬೇಕು ಎಂದು ಹೇಳಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ದಾವಣಗೆರೆ ಆಯ್ಕೆ ಮಾಡಿಸಲು ಯೋಜನೆಯ ಕ್ರಿಯಾ ಯೋಜನೆ ಹಾಗೂ ರೂಪುರೇಷೆ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದ್ದೇ ಸಂಸದರು. ಆದರೆ ನೀವು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಸಂಸದರ ಪಾತ್ರವೇನು? ಎಂದು ಪದೇ ಪದೇ ಪ್ರಶ್ನಿಸುವುದು ಸರಿಯಲ್ಲ ಎಂದರು.

ಜೆ.ಪಿ. ಅವನ್ಯಾರು? ಎಂದು ಇತ್ತೀಚೆಗೆ ಮಾಧ್ಯಮದವರ ಮುಂದೆ ಸಚಿವರು ಪ್ರಶ್ನಿಸಿದ್ದಾರೆ. 1994ರಿಂದ 2008ರವರೆಗೆ ನಾನು ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದು, ವಿವಿಧ ಸಂಘಟನೆಗಳ ನಾಯಕನಾಗಿರುವುದು ತಾವು ನೋಡಿಲ್ಲವೇ? ಎಂದು ಜೆಪಿ ಪ್ರಶ್ನಿಸಿದರು. ವಿದ್ಯಾರ್ಥಿ ನಾಯಕನಾಗಿ, ಹೋರಾಟಗಾರನಾಗಿ 40 ವರ್ಷ ಜನ ಸೇವೆಯಲ್ಲಿ ಪಾಲ್ಗೊಂಡಿದ್ದ ನಾನು, ಇಂದಿನ ವ್ಯಾಪಾರಿ ರಾಜಕಾರಣದಲ್ಲಿ ಕಳೆದು ಹೋಗಿದ್ದೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಶಿವರಾಜ್ ಪಾಟೀಲ್ ಇದ್ದರು.

## ಗ್ರಾಮೀಣ ಅಭ್ಯರ್ಥಿಗಳಿಗೆ ತರಬೇತಿಗೆ ಸಂದರ್ಶನ

ದಾವಣಗೆರೆ, ನ.6 - ತೋಳಹುಣಸೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಗ್ರಾಮೀಣ ಮಟ್ಟದ ಅಭ್ಯರ್ಥಿಗಳಿಗಾಗಿ ಅಣಬೆ ಬೇಸಾಯ ತರಬೇತಿ, ವಿದ್ಯುತ್ ಪಂಪ್‌ಸೆಟ್ ಮತ್ತು ಮೋಟಾರ್ ರಿವೈಂಡಿಂಗ್ ತರಬೇತಿ ನಡೆಯಲಿದೆ. ತರಬೇತಿಗೆ 24.11.23ರಂದು ಸಂದರ್ಶನ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 7019980484, 9483386143, 9964111314,9538395817,9481977076.

## ಶಿಳ್ಳೇಕ್ಯಾತರ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಹೇಮಣ್ಣ ಆನೆಕೊಂಡ




ದಾವಣಗೆರೆ, ನ. 06 - ಜಿಲ್ಲಾ ಶಿಳ್ಳೇಕ್ಯಾತರ ಅಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಕೆ. ಹೇಮಣ್ಣ ಆನೆಕೊಂಡ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಯಲ್ಲಪ್ಪ ಬಸವರಾಜಪುರ, ಕಾರ್ಯದರ್ಶಿಯಾಗಿ ಎ. ಮಂಜುನಾಥ, ಸಹ ಕಾರ್ಯದರ್ಶಿಯಾಗಿ ಎಸ್. ಮಂಜುನಾಥ, ಸಂಘಟನಾ ಕಾರ್ಯದರ್ಶಿ ಮೃತ್ಯುಂಜಯ, ಖಜಾಂಚಿಯಾಗಿ ಎಲ್. ಕೆ. ಸಂಗಪ್ಪ, ನಿರ್ದೇಶಕರುಗಳಾಗಿ ಬಸವರಾಜಪ್ಪ, ದಶರಥ, ಮಹದೇವಪ್ಪ, ಗುರುಕುಲಪ್ಪ, ಪಿ. ಪರಶುರಾಮ, ಸಿ. ಮಲ್ಲಿಕಾರ್ಜುನ, ಬಿ. ಮಂಜುನಾಥ, ಆರ್. ಶ್ರೀನಿವಾಸ, ದುರ್ಗಪ್ಪ, ಪರಶುರಾಮಪ್ಪ, ದಾದಾಪುರ ವೀರಣ್ಣ, ಎಸ್. ಬಸವರಾಜ, ಎಸ್. ಮಂಜುನಾಥ, ಹನುಮಂತ ಗೋಣಿಕೆರೆ, ಕೆ. ಮೋಹನ, ಕೃಷ್ಣಪ್ಪ, ನಾಗರಾಜ, ಆರ್. ಬಸವರಾಜ್ ಇವರು ಆಯ್ಕೆಯಾಗಿದ್ದಾರೆ.

## ಸುಪ್ರೀಂಗೆ ಮೂವರು ಜಡ್ಜ್‌ಗಳ ಶಿಫಾರಸ್ಸು

ನವದೆಹಲಿ ನ. 6-ಸುಪ್ರೀಂ ಕೋರ್ಟ್‌ಗೆ ಮೂವರು ನ್ಯಾಯಮೂರ್ತಿಗಳನ್ನು ನೇಮಿಸಲು ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಅವರ ನೇತೃತ್ವದ ಕೊಲೀಜಿಯಂ ಶಿಫಾರಸ್ಸು ಮಾಡಿದೆ. ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ, ರಾಜಸ್ಥಾನದ ಮುಖ್ಯ ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಹಾಗೂ ಗೌಹಾತಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರನ್ನು ಸುಪ್ರೀಂ ಕೋರ್ಟ್‌ಗೆ ನೇಮಿಸಲು ಶಿಫಾರಸ್ಸು ಮಾಡಲಾಗಿದೆ.


## ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಸಭೆ







ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಸಭೆಯನ್ನು ದಿನಾಂಕ: 07.11.2023ರ ಮಂಗಳವಾರ ಮಧ್ಯಾಹ್ನ 3.00 ಗಂಟೆಗೆ ಹರಿಹರ ನಗರದ ಶಿವಮೊಗ್ಗ ರಸ್ತೆಯಲ್ಲಿರುವ ಶ್ರೀ ತರಳಬಾಳು ಪ್ರೌಢಶಾಲೆಯಲ್ಲಿ ಸಮಾಜದ ಅಧ್ಯಕ್ಷರಾದ ಶ್ರೀ ಅಮರಾವತಿ ಮಹಾದೇವಪ್ಪ ಗೌಡ್ರು ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

ಸಭೆಯಲ್ಲಿ ಹರಿಹರ ಕ್ಷೇತ್ರದ ಶಾಸಕರಾದ ಶ್ರೀ ಬಿ.ಪಿ. ಹರೀಶ್, ದಾವಣಗೆರೆ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಹೊಳೆಸಿರಿಗೆರೆ ಹಾಲೇಶಪ್ಪ, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸಿರಿಗೆರೆ ರಾಜಣ್ಣ ಮತ್ತು ಯಲವಟ್ಟಿಯ ನಿವೃತ್ತ ಯೋಧ ಶ್ರೀ ಹೆಚ್. ಶಿವಕುಮಾರ್ ಇವರುಗಳನ್ನು ಸನ್ಮಾನಿಸಲಾಗುವುದು. ಅಲ್ಲದೇ, ಬೆಳ್ಳೂಡಿಯಲ್ಲಿ ನಡೆದ ಭಕ್ತಿ ಸಮರ್ಪಣೆ ಕಾರ್ಯಕ್ರಮದ ಲೆಕ್ಕಪತ್ರಗಳ ಮಂಡನೆ ಮತ್ತು ಸಮಾಜದ ಆಗುಹೋಗುಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. ಆದ್ದರಿಂದ ಈ ಸಭೆಗೆ ಸಮಾಜದ ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ತಪ್ಪದೇ ಆಗಮಿಸುವಂತೆ ಕೋರಲಾಗಿದೆ.



ಅಮರಾವತಿ ಮಹಾದೇವಪ್ಪ ಗೌಡ್ರು
ಅಧ್ಯಕ್ಷರು, ಹರಿಹರ.

ನಿಟ್ಟೂರು ಇಟಗಿ ಶಿವಣ್ಣ, ಕಾರ್ಯದರ್ಶಿ

ಸಾಧು ವೀರಶೈವ ಸಮಾಜ, ಹರಿಹರ ತಾಲ್ಲೂಕು



## ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ 31ನೇ ವಾರ್ಡಿನಲ್ಲಿ ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಅಭಿವೃದ್ಧಿ ಕಾಮಗಾರಿಗೆ

## ಭೂಮಿಪೂಜೆ ಸಮಾರಂಭ



ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ತೋಟಗಾರಿಕೆ ಹಾಗು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಇವರಿಂದ

| ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| 1) ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ 31ನೇ ವಾರ್ಡ್‌ನ ಎಸ್‌ಓಜಿ ಕಾಲೋನಿಯ ಅಲ್ಪಸಂಖ್ಯಾತರ ಕಾಲೋನಿ 'ಎ' ಮತ್ತು 'ಬಿ' ಬ್ಲಾಕ್‌ನ ಮಧ್ಯದಲ್ಲಿರುವ ಮುಖ್ಯರಸ್ತೆಯನ್ನು ಸಿಸಿ ರಸ್ತೆಯನ್ನಾಗಿ ಅಭಿವೃದ್ಧಿ ನಿರ್ಮಾಣ ಕಾಮಗಾರಿ. | 60.00 |

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ

### ಹೃದಯಪೂರ್ವಕ ಸ್ವಾಗತ ಸುಸ್ವಾಗತ

ಸ್ಥಳ : ಸರ್ಕಾರಿ ಶಾಲೆಯ ಹತ್ತಿರ, ಎಸ್‌ಓಜಿ ಕಾಲೋನಿ.
ಸಮಯ : ಮಧ್ಯಾಹ್ನ 1-30ಕ್ಕೆ



ಗೌಡ್ರು ನಾಗರಾಜ್
(ಜಾಮೇನಹಳ್ಳಿ), ಸದಸ್ಯರು, ಮಹಾನಗರ ಪಾಲಿಕೆ

ಪ್ರಕಟಣೆ : 31ನೇ ವಾರ್ಡ್‌ನ ಸಮಸ್ತ ಜನತೆ



## ನಾಯಿ (ಲಡ್ಡು) ಕಳೆದಿದೆ



ದಾವಣಗೆರೆ ಆಂಜನೇಯ ಬಡಾವಣೆ, 13ನೇ ಕ್ರಾಸ್‌ನಿಂದ ದಿನಾಂಕ 05.11.2023ರ ಭಾನುವಾರ ಸಂಜೆ 5.30 ರಿಂದ ಲಡ್ಡು ಎಂಬ ಹೆಸರಿನ ನಾಯಿ ಕಾಣೆಯಾಗಿದೆ.

ನಾಯಿಯ ಹೆಸರು : ಲಡ್ಡು
ವಯಸ್ಸು : 3 ವರ್ಷ
ಕಪ್ಪು ನಾಯಿ, ಪಾದಗಳು ಹಾಗೂ ಬಾಲದ ಜೊತೆಗೆ ಕತ್ತಿನ ಭಾಗ ಬೆಳ್ಳಗಿದೆ.

ಸಿಕ್ಕ ಕೂಡಲೇ ದಯವಿಟ್ಟು ಈ ಕೆಳಗಿನ ನಂ.ಗೆ ತಿಳಿಸಲು ಕೋರಿದೆ.
ಸಿದ್ದಾರ್ಥ : 94482 05025, ರೂಪ : 76763 69947



ssims SPARSH
CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 9ನೇ ನವೆಂಬರ್ 2023 । ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


## ಶ್ರೀಮತಿ ಶಶಿಕಲಾ ಇ.ಆರ್ ರವರಿಗೆ 2023ನೇ ಮಹಾತ್ಮ ಗಾಂಧಿ ಸದ್ಭಾವನಾ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ



ಮಹಿಳಾ ಉದ್ಯಮಿ, ಶಿಕ್ಷಣ ಪ್ರೇಮಿ, ಸರಳ ವ್ಯಕ್ತಿತ್ವವುಳ್ಳ ಲಲಿತಾ ವಿದ್ಯಾಸಂಸ್ಥೆಯ ನಿರ್ಮಾತೃಗಳಾದ ಶ್ರೀಮತಿ ಶಶಿಕಲಾ ಇ.ಆರ್ ಇವರಿಗೆ ಶಿಕ್ಷಣ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಅವಿಸ್ಮರಣೀಯ ಸೇವೆಯನ್ನು ಮನಗಂಡು ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರ ಉಪಸ್ಥಿತಿಯಲ್ಲಿ "2023ನೇ ಮಹಾತ್ಮ ಗಾಂಧಿ ಸದ್ಭಾವನಾ ಅಂತರರಾಷ್ಟ್ರೀಯ ಪ್ರಶಸ್ತಿ"ಯನ್ನು ಪ್ರದಾನ ಮಾಡಿ ಗೌರವಿಸಲಾಯಿತು.


## ಗ್ರಾಹಕರ ಅಪೇಕ್ಷೆಯ ಮೇರೆಗೆ ಸೇಲ್‌ನ್ನು 2 ದಿನಗಳ ಕಾಲ ಮುಂದುವರೆಸಲಾಗಿದೆ.

ದೀಪಾವಳಿ ಹಬ್ಬದ ಬಟ್ಟೆಗಳನ್ನು ಖರೀದಿಸಲೂ ಗ್ರಾಹಕರಿಗೆ ಸುವರ್ಣವಕಾಶ !

### ಮಲ್ಟಿ ಬ್ರಾಂಡೆಡ್‌ಗಳ ರೆಡಿಮೇಡ್ ಗಾರ್ಮೆಂಟ್ಸ್ ಸೇಲ್

ಪುರಷರ, ಮಹಿಳೆಯರ, ಮಕ್ಕಳ ಹಾಗೂ ಬೆಡ್‌ಶೀಟ್‌ಗಳು

Upto 80% ವರೆಗಿನ ಭಾರಿ ರಿಯಾಯಿತಿ ದರದಲ್ಲಿ ಮಾರಾಟ !

ಸೂಚನೆ : ದೀಪಾವಳಿ ಹಬ್ಬದ ಸಲುವಾಗಿ ನಮ್ಮಲ್ಲಿ ವಿಶೇಷವಾಗಿ ವಿವಿದ ವೈವಿಧ್ಯಮಯ ವಿನ್ಯಾಸದ ಬಟ್ಟೆಗಳು 50,000 ಕ್ಕೂ ಹೆಚ್ಚು ಬ್ರಾಂಡೆಡ್ ಉಡುಪುಗಳು

### ಈಗ ಅತಿ ಕಡಿಮೆ ದರದಲ್ಲಿ ಮಾರಾಟ

ಪ್ಯಾಂಟ್ , ಶರ್ಟ್, ಟಿ-ಶರ್ಟ್, ಲೋವರ್, ಬರ್ಮುಡಾ, ಕುರ್ತಿ, ಟಾಪ್ಸ್, ಪೈಜಾಮ, ವೆಸ್ಟರ್ನ ಔಟ್ ಫೀಟಿಗಳಂತಹ ಬಟ್ಟೆಗಳು

ಸ್ಥಳ : ರೇಣುಕಾ ಕಲ್ಯಾಣ ಮಂದಿರ, ದಾವಣಗೆರೆ.

MRP₹ 899/- ವರಿಗಿನ ಶರ್ಟ್/ಟೀ-ಶರ್ಟ್/ಪ್ಯಾಂಟ್ ಈಗ ₹250/- ರಿಂದ

ಬ್ರಾಂಡೆಡ್ ಪ್ರೇಮಿಯರ್ ಶರ್ಟ್‌ಗಳು, ಜೀನ್ಸ್, ಕಾಟನ್ ಪ್ಯಾಂಟ್‌ಗಳು

DANIEL HECHTER, HIGHLANDER, INDIGO NATION, Pepe Jeans LONDON, BEAT LONDON, IZOD, LOCOMOTIVE, BUFFALO, INDIAN TERRAIN, BARE CASUALS, SCULLERS, JOHN MILLER

MRP₹1599/- ರಿಂದ 3999/- ವರಿಗಿನ ಈಗ ಕೇವಲ ₹ 599/- ರಿಂದ 1199/-ವರೆಗೆ

MRP ₹1299/- ರಿಂದ 2999/- ವರಿಗಿನ ಬ್ರಾಂಡೆಡ್ ಟಿ-ಶರ್ಟ್‌ಗಳು ಕೇವಲ ₹ 499/- ರಿಂದ ₹699/-ವರೆಗೆ

ಲೇಡಿಸ್ ಕುರ್ತಿಸ್ : ಲಾಂಗ್ ಕುರ್ತಿಸ್, ಸ್ಟೋನ್ ವರ್ಕ್ಸ್ ಕುರ್ತಿಸ್, ಮಲ್ಟಿ ಕಲರ್ ಪ್ರಿಂಟೆಡ್ ಕುರ್ತಿಸ್, ವುಮೆನ್ಸ್ ಕಾಟನ್ ಪ್ರಿಂಟೆಡ್ ಕುರ್ತಿಸ್, ರಿಯಾನ ಪ್ರಿಂಟೆಡ್ ಕುರ್ತಿಸ್, ಇಲ್ಲಿ ಕೇವಲ ₹250/- ರಿಂದ 599/-ವರೆಗೆ

ಬ್ರಾಂಡೆಡ್ ಮಕ್ಕಳ ಗಾರ್ಮೆಂಟ್ಸ್ ಕೇವಲ ₹150/- ರಿಂದ 350/- ವರೆಗೆ

ಮಹಿಳೆಯರ ಪ್ಯಾಂಟ್‌ಗಳು, ₹1599/- ರಿಂದ 2299/- ವರೆಗೆ ಕೇವಲ ₹ 599/- ಮಾತ್ರ

ರಾಜಸ್ತಾನಿ ರಾಯಲ್ಸ್ ಪ್ರಿಂಟೆಡ್ ಬೆಡ್‌ಶೀಟಗಳು ಪಿಲ್ಲೋ ಕವರ್, ಸೋಫಾ ಕವರ್‌ಗಳು ಭಾರಿ ರಿಯಾಯಿತಿ ದರದಲ್ಲಿ

ಸೇಲ್ ಕೇವಲ 2 ದಿನಗಳು ಮಾತ್ರ | ಮಂಗಳವಾರ 7 | ಬುಧವಾರ 8 ನವೆಂಬರ್ 2023
ಬೆಳಿಗ್ಗೆ 10 ರಿಂದ ರಾತ್ರಿ 10 ರವರೆಗೆ ಊಟದ ವಿರಾಮವಿಲ್ಲ
*T & C Apply
ಉಚಿತ ಪ್ರವೇಶ ಪಾರ್ಕಿಂಗ್
All Major Debit / Credit Cards. Google Pay, Phon ePe Accepted

ರೇಣುಕಾ ಕಲ್ಯಾಣ ಮಂದಿರ
ಪಿ.ಬಿ. ರಸ್ತೆ, ರೈಲ್ವೆ ನಿಲ್ದಾಣದ ಹತ್ತಿರ, ದಾವಣಗೆರೆ.

RENUKA KALYANA MANDIRA
P.B. Road, Near Railway Station, Davanagere - 577 002.


## ಚನ್ನಗಿರಿ ವನಜಾಕ್ಷಮ್ಮ ನಿಧನ



ದಾವಣಗೆರೆ ಕುವೆಂಪು ರಸ್ತೆ (ಲಾಯರ್ ರಸ್ತೆ) ನಿವಾಸಿ,

ಚನ್ನಗಿರಿ ವಿರೂಪಾಕ್ಷಪ್ಪನವರ ಧರ್ಮಪತ್ನಿ

### ಶ್ರೀಮತಿ ಚನ್ನಗಿರಿ ವನಜಾಕ್ಷಮ್ಮ

ಅವರು ದಿನಾಂಕ : 6-11-2023ರ ಸೋಮವಾರ ಸಂಜೆ 6-50ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಪತಿ ಚನ್ನಗಿರಿ ವಿರೂಪಾಕ್ಷಪ್ಪ ಸೇರಿದಂತೆ ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆಯು ದಿನಾಂಕ 7-11-2023ರ ಮಂಗಳವಾರ ಮಧ್ಯಾಹ್ನ 12-30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದು:ಖತಪ್ತ ಚನ್ನಗಿರಿ ಕುಟುಂಬವರ್ಗ